Influence brings change and the change paves way for new approach. The cause and the effect of the change decide the direction and the impact of the change that brings with the new approach. For instance: Application and innovation of science has brought new possibilities in the use of chemicals which can be used to cure disease, can also be used to activate weapon and so on. Both applications are for the betterment of human life but the situation and the requirement differs. Thus the necessity and the impact vary. In art form the presentation and preservation are two significant channels through which they are passed on to the next generation.

- **Presentation:**

Presentation provides an opportunity for performer to share the joy of art i.e., music or dance with the audience. It also brings likeminded people together enabling them to enjoy art, aesthetic beauty, creativity simultaneously. The way music and dance are presented has undergone many changes specially after the technological intervention. The place of performance, the type of performance, the planning of performance are greatly influenced by the changes brought by the technology. This does not mean that the technology alone has caused the change in art forms. However some significant changes related to presentation, planning,

execution are influenced by the technology. Apart from technology there are other factors like changing trends, variety entertainments, globalisation etc. People want something new and innovative. In order to cater to the needs of audience of all classes artistes may end up modifying the existing unwritten rules for a while this could also result in major change in presentation. For instance: adding an extra note (swara) to make a particular raga sound interesting, choreographing a song with new ideas influenced by the contemporary styles ranging from neighboring region to international and so on. These new idea might appear exciting for younger generation while it could sound exotic for those who have heard and seen the traditional version. If the change does influence the entertaining aspect of art form it would be of positive type and can creat no harm. If the change affects the fundamental value then it needs to be carefully examined and then encouraged for the preservation of art form in its original state or structure.

- **Preservation:**

Preservation of art form whether it is music or dance is dependent on two factors i.e., performing and appreciating on one hand, teaching and learning on the other hand. The first involves serious performer who is also called professional and audience/listener who are called "Shrotru", "Rasika", "Sabhika" etc in different region and language. The second category of art lovers are links between the performer and audience. In teaching the ancient Indian tradition was "Gurukula" system where the student would learn and master the art form at the constant company and presence of "Guru" (teacher). In this method the art, skill, value etc. are taught with at most care and caution. The modern approach in the form of institutions have taken over this responsibility from "Gurukula". Institutions function based on their own norms and a few taken from tradition. These changes have influenced both music and dance to a great extent. There are advantages and also a few disadvantages. Some beliefs and ideas are up rooted. There are also some welcome changes which have provided access to art form for everyone. In ancient system of gurukula there was customised teaching for shishyas whereas, institutional teaching is based on some generalised norms hence cannot customise it for every student. Personality development was part of teaching in gurukula but the institutional teaching concentrates on specialisation so the student has to opt for an extra cource called personality development skills. Thus the values are changing, the approach is changing, the focus is shifting from treating teaching as noble service to considering it as paid service. However, it doesn't mean the quality of teaching has come down but the traditional values are changing. An artist could lead dignified

life till the values were regarded of highest in ones personality. But, the change in traditional value itself has forced artistes, teachers, organisers to look music and dance as an industry. Today leading dignified life is also considered having all the facility and materialistic wealth. Hence the teaching and performing field has undergone many changes when compared to that of the traditional gurukula system.

It is time for musicians, dancers, teachers and scholars to think about preserving our traditional values in spite of changes which are inevitable. This is the right time to brighten the guiding light of art forms and embark the journey towards value based entertainment. To conclude, Accepting or rejecting change in totality is not the solution for preservation of art forms like music and dance. Neither projecting new nor glorifying the past can bring positive growth and enhancement of values in art forms. The perfect equilibrium between tradition and modernism can help the art forms like music and dance enhance the value in society inspiring people to become better and responsible citizens.

Dr. Uday Kiran,
Associate Professor-Music, Jain Unvty

Dr. S.C. Sharma
Ex-Vice-Chancellor, Tumkur University
Professor, Mechanical Engineering Jain Unvty &
Advisor, Avinashilingam University for Women

Contributions of Sri Swati Tirunal (Sri Padmanabhadasa Sri Ramavarma Kulashekara Perumal) to Carnatic Classical Music

Formative years:

Born on **16th April 1813**, **Sri Swati Tirunal,** was second child of King Raja Raja Varma Koil and Queen Gowri Lakshmi Bai, belonging to *Chera dynasty* of Tiruvancor princely state. He was also called as **'Garbha Sriman'**, (गर्भ श्रीमान्) since he was declared as 'King' while he was in his mother's womb. Later, at the age of 16, this child prodigy was coronated and officially declared as 'King'.

Regarded as one of the foremost Vaggeyakaras of Carnatic classical music of 19th century, thanks to his brilliant works, the Carnatic music reached its greatest heights during his period, and also because of other music maestros and Vaggeyakara stalwarts, who were contemporaries and witnessed **'Golden Era'**.

Achievements and contributions to Carnatic classical music:

The main aspect found in his compositions of Carnatic classical music are abundant use of Swara Jati, Taana varna, Pada varna, Kruti, Pada, Jaavali, Tillana and Raga Malikas. Also he had composed Abhangas in Marathi language (a collaborative work). Sri Shesha Iyengar was his guide and tutor for his compositions.

Being an expert in many languages, he had composed kritis in Sanskrit, Malayalam, Kannada, Telugu, Tamil languages and it is found that he had used the various names of his diety, Sri Anantha Padmanaabha, viz., (पद्मनाभ), Padmanaabha, (अब्जनाभ) Abjanaabha, (कमलनाभ) Kamalanaabha, (सरोजनाभ) Sarojanaabha, (वारिजनाभ) Varijanaabha, (सरसीरुहनाभ) Saraseeruhanaabha, (अंभोरुहनाभ) Ambhoruhanaabha, (सरसिजनाभ) Sarsijanaabha, (कंजनाभ) Kanjanaabha, (जलजनाभ) Jalajanaabha, (नळिननाभ) Nalinanaabha, (नीरजनाभ) Neerajanaabha, (पंकजनाभ) Pankajanaabha, (पुंडरीकनाभ) Pundareekanaabha, (वनरुहनाभ) Vanaruhanaabha, (सारसनाभ) Saarasanaabha, (जलरुहनाभ) Jalaruhanaabha, etc., as **'Ankitanas'** (a mark of identification specified in poetic and musical compositions by an author) in those compositions.

It is learnt that he himself had composed music in Pantuvarali, Todi ragas with Varna mattus of Taana Varna, Pada Varna for some of his compositions. It is also learnt that for the remaining compositions which are now available 'Varna Mattus' are composed by Muttaiah Bhagavatar and Shemmangudi Iyyer. In his compositions ragas which are seldom found viz., Navarasa, Poorva Kambhoji, Saidhavi, Ghanta, Gowri, Kamodari, Gopikaavasanta, Paadi, Lalitapanchami, are used and and Taalas viz., Roopaka, Chaapu, Aadi, Atta, Triputa, etc., are enormously used. He had profound knowledge in composing Varnas and had composed 21 Varnas out of which 5 indicates **'Bhakti'** rasa and remaining are **'Shrungaara'** rasa.

Hallmarks of Artistry and Characteristics of kritis:

Most of his kritis have characters of Dikshits which possess **'Vilamba Nade'** and Madhyama Kalas, also characters of Saint Tyagaraja i.e., the later part of Charanas of Kritis are similar to **'Varna Mattus'** of Anupallavis. Almost all his compositions are in Suddha, Soochita and Mishra style of **'Swaraakshara'** and the varnas used are best models for respective **'Raga Lakshyas'**.

Hitherto about 300 compositions of Sri Swati Tirunalare found and amongst them **'Navaraatri Kirtanas'** and **'Navaratna Maalika'** kritis are considered as 'Samudaya' kritis. The 'Navaraatri Kirtanas' are dedicated to Goddess Saraswati and Goddess Paarvati which are as follows:

Kritis dedicated to Goddess Saraswati:

(दॆवि जगज्जननी) 'Devi Jagajjanani' in Shankaraabharana raga, Adi tala
(पाहिमां श्रीवागीश्वरि) 'Pahimam Sri Vageeshwari' in Kalyani raga, Adi tala
(दॆवि पावनॆ) 'Devi Paavane' in Saveri raga, Adi tala
(भारती मामव) 'Bharati Maamava' in Todi raga, Adi tala
(जननी मामवमॆये) 'Janani Mamavameye' in Bhairavi raga, Mishra Chapu tala
(सरॊरुहासन जायॆ) 'Saroruhaasana Jaaye' in Pantuvaraali raga, Adi tala

Kritis dedicated to Goddess Paarvati:

(जननी पाहि सदा) 'Janani Paahi Sadaa' in Shuddha Saaveri raga, Mishra Chapu tala
(पाहि जननी संततं) 'Paahi Janani Satatam' in Natakurunji raga, Mishra Chapu tala
(पाहि पर्वत नंदिनि) 'Pahi Parvata Nandini' in Arabhi raga, Mishra Chapu tala

Another important aspect is that Sri Swati Tirunal was greatly influenced by **Bhagavad Gita**, especially **'Bhakti Yoga'**, the 12th chapter and this has been substantiated by his **'Navaratna Maalika'** which clearly reveals nine types of Bhakti maargas, as detailed below:

Shravana–(भवदिया कथ) 'Bhavadiyaa Katha' in Bhairavi raga, Adi tala
Keertana–(तवकन मनि) 'Tavakana Mani' in Kedaragowla raga, Jhampa tala
Smarana–(सततं संस्मरोनिह) 'Satatam Samsmaroniha' in Neelambari raga, Atta tala
Paadasevana–(पंकजाक्ष) 'Pankajaaksha' in Todi raga, Roopaka tala
Archana–(आराधयामि) 'Aradhayaami' in Bilahari raga, Atta tala
Vandana–(वंदे देवदेव) 'Vande Devadeva' in Begade raga, Jhampa tala
Daasya–(परम पुरुष) 'Parama Purusha' in Ahiri raga, Atta tala
Sakhya–(भवतो विश्वसो) 'Bavato Vishvaso' in Mukhaari raga, Atta tala
Atma Nivedana–(देवदेव कलयामि) 'Devadeva Kalayaami' in Nadanamakriya raga, Roopaka tala

श्रवणं कीर्तनं विष्णोः स्मरणं पादसेवनं ।
अर्चनं वंदनं दास्यं सख्यमात्मनिवेदनं ॥

Shravana, Keertana, Smarana, Paadasevana, Archana, Vandana, Daasya, Sakhya and Atma Nivedana–are instrumental for a devotee on his path of 'Bhakti' to attain Moksha. Through his compositions and ragas, Sri Swati Tirunal tries to take the path of **'Bhakti'** gradually to reach zenith through **'Sagunopaasana'** (embodying the God with all good qualities) as follows:

By residing with God at his eternal abode, by possessing qualities of God, by always adorning the charms and beauties of God, by worshipping his various manifestations and merging with God, in other words subliming onself with Brahman or the cosmic power. The most important here is the last one i.e., **'Aatma Nivedana'** means offering and surrendering oneself to Paramaatma. The devotee shall eschew his **'Ego'** and realise the eternal truth that **'He'** is supreme, omni-potent, omni-present and **'He'** is the reason for all deeds. In this regard, the **'Navaratna Maalika'** has greatly succeeded in creating introspection, self-realization and determination towards liberation amongst the devotees.

It is learnt that apart from this Sri Swati Tirunal himself was an expert in playing **'Swarabat'**, a string instrument and also a gifted author of many musical compositions.

Any analytical study made on his raga maalikas reveals that the influence of Lord Sri Ananthapadmanaabha, his most venered diety, wherein he had made compositions in variety forms and dedicated to his diety. Amongst (कमलाजस्य) 'Kamalaajasya' in Dasha raga maalike, portraying Lord Vishnu's ten incarnations, entire Ramayana in a nutshell in (भावयामि रघुरामं) 'Bhavayami Raghuramam' in Sapta raga maalika, brief Ramayana in kritis viz., (योजय साधय) 'Yojaya Sadhaya' and (सानं-तं) 'Sa Nam-tam' in Chatur raga maalika, the essence of Bhagavata in (भावये श्रीगोपालं) 'Bhaavaya Sri Gopalam', (सारभव धृतपद) 'Sarasabhava Dhrutapada' in Pancha raga Swara jati, (पन्नगेंद्र शयन) 'Pannagendra Shayana' in Ashta raga maalika, (सुमसायक) 'Suma Saayaka' in Pancharaga Taana Varna, (भक्ति मंजरि) Bhakti Manjari, (स्यनंदुरपुरवर्णन प्रबंधं) Syanandapura Varnana Prabandhan, (पद्मनाभाष्टकं) Padmanabhaashtakam, (मूहनप्रास-अंत्यप्रास व्यवस्था) Moohanapraasa-Antyapraasa Vyavasthaa, (अजामिळ-कुचेल उपाख्यान) Ajaamila-Kuchela Upaakyaana, (उत्सव वर्णन प्रबंध) Utsava Varnana Prabhandham, etc.,.

Inclination towards Hindustani Music:

Apart from Carnatic classical music, Sri Swati Tirunal had expertise in Hindustani classical music which is evidence from his 37 compositions and hence some of his raga malikas are in Drupad, Dharmaar, Khyal, Tappatumri, etc.,. It may be stated that Sri Swati Tirunal was first amongst the south Indian Vaggeyakaaras who made compositions in Hindustani classical music.

Development of Carnatic music and royal patronage to musicians:

Sri Swati Tirunal, the worshipper of art, identified, encouraged and honoured the musicians from Karnataka, Maharashtra, Andrapradesh, Tamilnadu and gave royal patronage to music and art. He had an ambitious project to fine tune the traditional and conventional melody of the ragas which were in vogue, by selecting and blending the good qualities of the other music styles to create a unique Indian

music style/practice with all characteristics of mellifluousness, sweetness and subtleness.

There were a galaxy of musicians in his court and were patronized by him, viz., Ponnaiah, Chinnaiah, Shivanandam, Vadivelu, Kannaiah Bhagavatar, Ravivarman Tambi, Tanjavoor Chintamani, Kshirabdhi Shastri, Shatkaala Govinda Marar, Cholapuram Ragunatha Rao, Subbaiah Kutti Ayya, Tanjavoor Rangai Iyyengar, Suleman Saheb, Anandapadma Goswami, etc.,.

His other achievements:

Apart from music, he also made tremendous achievement in the adminstration also thereby the Travancore province became one of the foremost and advanced princely state during 19th century. Introduction of English language as a medium of instruction in the education, establishment of planet observatory, Government Printing Press, first library of ancient scriptures and literature, upgradation of judiciary, code of conduct for citizens, etc., made Travancore a 'Model State'.

But, this great illustrious musician, patron of music and art and administrative visionary breathed his last at the age of 34, i.e., on **25th December 1846** and merged at the feet of Goddess Saraswathi. Hence, this word tribute is dedicated to that great maestro on the occasion of 169th death anniversary, who sublimated in the infinity.

(Dr. S.C. Sharma)
Academician & Educationist

Biblography:

1. Srimad Bhagavad Gita, Bhakti Yoga 12th chapter, Gita Press, Gorakhpur, UP
2. Srimad Bhagavatha, 13th hymn, 29th chapter, Bhaktiyogamarma, Gita Press, Gorakhpur, UP
3. Website hosted by Department of Culture, Kerala Government www.swatitirunal.org
4. Sangeeta Lakshana Sangraha–2, Prasaranga, Bangalore University
5. Google Wikipedia

ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಸ್ವಾತಿ ತಿರುನಾಳ್
(ಶ್ರೀ ಪದ್ಮನಾಭದಾಸ ಶ್ರೀರಾಮವರ್ಮ ಕುಲಶೇಖರ ಪೆರುಮಾಳ್)ರ ಕೊಡುಗೆ

ಸ್ವಾತಿ ತಿರುನಾಳ್ (ಶ್ರೀ ಪದ್ಮನಾಭದಾಸ ಶ್ರೀರಾಮವರ್ಮ ಕುಲಶೇಖರ ಪೆರುಮಾಳ್) ತಿರುವಾಂಕೂರ್ ಸಂಸ್ಥಾನದ ಚೇರ ರಾಜಮನೆತನದವರಾದ ಇವರು 16ನೇ ಏಪ್ರಿಲ್ 1813ರಂದು ರಾಜ ರಾಜ ವರ್ಮ ಕೋಯಿಲ್ ಮತ್ತು ರಾಣಿ ಗೌರಿ ಲಕ್ಷ್ಮೀ ಬಾಯಿಯವರ 2ನೇ ಮಗುವಾಗಿ ಜನಿಸಿದರು. ಇವರನ್ನು **'ಗರ್ಭ ಶ್ರೀಮಾನ್'** ಎಂದೂ ಸಹ ಕರೆಯಲಾಗಿದೆ, ಕಾರಣ ಇವರು ತಾಯಿಯ ಗರ್ಭದಲ್ಲಿದ್ದಾಗಲೇ ಇವರನ್ನು 'ರಾಜ'ನೆಂದು ಘೋಷಿಸಲಾಗಿತ್ತು. 16 ವರ್ಷವಾಗಿದ್ದಾಗಲೇ ಇವರು ಅಧಿಕೃತವಾಗಿ ಮಹಾರಾಜನೆಂದು ಪಟ್ಟಾಭೀಷಿಕ್ತರಾಗುತ್ತಾರೆ.

ಇವರು 19ನೇ ಶತಮಾನದ ಪ್ರಮುಖ ವಾಗ್ಗೇಯಕಾರರಾದ ಇವರು ಕರ್ನಾಟಕ ಸಂಗೀತಕ್ಕೆ ನೀಡಿರುವ ಕೊಡುಗೆ ಅಪಾರ ಹಾಗೂ ಇವರ ಕಾಲಘಟ್ಟದಲ್ಲಿದ್ದ ಹಾಗೂ ಸಮಕಾಲೀನ ಇತರೆ ಸಂಗೀತ ವಿದ್ವಾಂಸರು, ವಾಗ್ಗೇಯಕಾರ ದಿಗ್ಗಜರಿಂದಾಗಿ ಕರ್ನಾಟಕ ಸಂಗೀತ ಕ್ಷೇತ್ರವು ಉಚ್ಛ್ರಾಯ ಸ್ಥಿತಿ ತಲುಪಿ ಸುವರ್ಣ ಯುಗವನ್ನು ಕಂಡಿತು.

<u>ಕರ್ನಾಟಕ ಸಂಗೀತಕ್ಕೆ ಇವರ ಸಾಧನೆ ಹಾಗೂ ಕೊಡುಗೆಗಳು:</u>

ಇವರ ರಚನೆಗಳಲ್ಲಿ ಕಂಡು ಬರುವ ಮುಖ್ಯ ಅಂಶವೆಂದರೆ ಕರ್ನಾಟಕ ಸಂಗೀತದ ಶೈಲಿಯಲ್ಲಿ ಸ್ವರ ಜತಿ, ತಾನ ವರ್ಣ, ಪದ ವರ್ಣ, ಕೃತಿ, ಪದ, ಜಾವಳಿ, ತಿಲ್ಲಾನ ಮತ್ತು ರಾಗಮಾಲಿಕೆಗಳ ವಿಫುಲ ಬಳಕೆ. ಅಲ್ಲದೆ ಇವರು ಮರಾಠಿ ಭಾಷೆಯಲ್ಲಿ ಅಭಂಗಗಳನ್ನೂ ರಚಿಸಿದ್ದಾರೆ. ಕೃತಿಗಳ ರಚನೆಯಲ್ಲಿ ಇವರಿಗೆ ಮಾರ್ಗದರ್ಶಿಯಾಗಿದ್ದವರು ಶೇಷಯ್ಯಂಗಾರರು.

ಬಹು ಭಾಷಾ ಪಾರಂಗತರಾಗಿದ್ದ ಇವರು ಸಂಸ್ಕೃತ, ಮಲಯಾಳಂ, ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಕೃತಿ ರಚನೆಗಳನ್ನು ಮಾಡಿದ್ದು ಅವುಗಳಲ್ಲಿ ಪದ್ಮನಾಭ, ಅಬ್ಜನಾಭ, ಕಮಲನಾಭ, ಸರೋಜನಾಭ, ವಾರಿಜನಾಭ, ಸರಸೀರುಹನಾಭ, ಅಂಭೋರುಹನಾಭ, ಸರಸಿಜನಾಭ, ಕಂಜನಾಭ, ಜಲಜನಾಭ, ನಳಿನನಾಭ, ನೀರಜನಾಭ, ಪಂಕಜನಾಭ, ಪುಂಡರೀಕನಾಭ, ವನರುಹನಾಭ, ಸಾರಸನಾಭ, ಜಲರುಹನಾಭ, ಮುಂತಾದ **'ಅಂಕಿತ'**ಗಳನ್ನು ಕೃತಿಗಳಲ್ಲಿ ಬಳಸಿರುವುದು ಕಂಡುಬರುತ್ತದೆ.

ಸ್ವಾತಿ ತಿರುನಾಳರು ತಮ್ಮ ಕೆಲವು ರಚನೆಗಳಿಗೆ ತಾವೇ ಖಿದ್ದು ಪಂತುವರಾಳಿ, ತೋಡಿರಾಗಗಳಲ್ಲಿ ತಾನ ವರ್ಣಗಳ, ಪದವರ್ಣಗಳ ವರ್ಣ ಮಟ್ಟುಗಳನ್ನು ಹಾಕಿರುವುದು ತಿಳಿದುಬರುತ್ತದೆ. ಪ್ರಸ್ತುತ ಉಪಲಭ್ಯವಿರುವ ಇವರ ಮಿಕ್ಕ ರಚನೆಗಳಿಗೆ ಶ್ರೀ ಮುತ್ತಯ್ಯ ಭಾಗವತರು ಹಾಗೂ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್‌ರವರುಗಳು ವರ್ಣ ಮಟ್ಟನ್ನು ಹಾಕಿರುವುದು ಕಂಡು ಬರುತ್ತದೆ. ಅಪೂರ್ವರಾಗಗಳಾದ ನವರಸ, ಪೂರ್ವ ಕಾಂಭೋಜಿ, ಸ್ವೆಂಧವಿ, ಘಂಟ, ಗೌರಿ, ಕಾಮೋದರಿ, ಗೋಪಿಕಾವಸಂತ, ಪಾಡಿ, ಲಲಿತಪಂಚಮ, ಮುಂತಾದ ರಾಗಗಳಲ್ಲಿ ಇವರ ರಚನೆಗಳು ಕಂಡುಬರುತ್ತವೆ ಹಾಗೂ ಇವುಗಳಲ್ಲಿ ರೂಪಕ, ಚಾಪು, ಝಂಪ, ಆದಿ, ಅಟ್ಟ, ತ್ರಿಪುಟ ತಾಳಗಳನ್ನು ವಿಫುಲವಾಗಿ ಬಳಸಿದ್ದಾರೆ. ವರ್ಣಗಳ ರಚನೆಯಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಹೊಂದಿದ್ದು ಹಾಗೂ 21 ವರ್ಣಗಳನ್ನು ರಚಿಸಿದ್ದು ಅವುಗಳಲ್ಲಿ 5 ಭಕ್ತಿರಸವನ್ನು ಸೂಚಿಸುವುದು ಹಾಗೂ ಇತರೆ ಶೃಂಗಾರ ರಸವನ್ನು ಸೂಚಿಸುವುದಾಗಿದೆ.

ಇವರ ಕೃತಿಗಳ ಮುಖ್ಯ ಲಕ್ಷಣ:

ಇವರ ಬಹುತೇಕ ಕೃತಿಗಳು **ದೀಕ್ಷಿತರ** ಕೃತಿಗಳಂತೆ **ವಿಳಂಬ ನಡೆ** ಹಾಗೂ **ಮಧ್ಯಮ ಕಾಲಗಳನ್ನು** ಹೊಂದಿದ್ದು, **ಸಂತ ತ್ಯಾಗರಾಜರ** ಕೃತಿಗಳಂತೆ ಚರಣದ **ಉತ್ತರಾರ್ಧದ** ಧಾತುವು ಅನುಪಲ್ಲವಿಯ ವರ್ಣ ಮಟ್ಟಿನಂತೆ ಹೋಲುತ್ತದೆ. ಇವರ ಬಹುತೇಕ ಎಲ್ಲಾ ರಚನೆಗಳಲ್ಲಿ ಶುದ್ಧ, ಸೂಚಿತ ಹಾಗೂ ಮಿಶ್ರ ರೀತಿಯ ಸ್ವರಾಕ್ಷರಗಳನ್ನು ಕಂಡುಬಂದಿದ್ದು ಅವುಗಳ ವರ್ಣಗಳು ಆಯಾ ರಾಗದ ಲಕ್ಷ್ಯಕ್ಕೆ ಉತ್ತಮ ಮಾದರಿಗಳಾಗಿವೆ.

ಇದುವರೆವಿಗೂ ಸ್ವಾತಿ ತಿರುನಾಳರ ಸುಮಾರು 300 ರಚನೆಗಳು ಲಭ್ಯವಾಗಿದ್ದು, ಅವುಗಳಲ್ಲಿ ಮುಖ್ಯವಾದ **'ನವರಾತ್ರಿ ಕೀರ್ತನೆ'** ಮತ್ತು **'ನವರತ್ನ ಮಾಲಿಕೆ'**ಯನ್ನು ಸಮುದಾಯ ಕೃತಿಗಳೆಂದು ಪರಿಗಣಿಸಲಾಗಿದೆ. **'ನವರಾತ್ರಿ ಕೀರ್ತನೆ'**ಗಳು ದೇವಿಯನ್ನು ಕುರಿತಾಗಿದೆ ಹಾಗೂ ನವರಾತ್ರಿ ಸಂದರ್ಭದಲ್ಲಿ ಪ್ರತಿ ದಿನವೂ ಒಂದೊಂದು ಕೀರ್ತನೆಯನ್ನು ಹಾಡಲಾಗುವುದು ಮತ್ತು ದೇವಿಯರಿಗೆ ಮೀಸಲಾಗಿದೆ:

ಸರಸ್ವತಿ ದೇವಿಗೆ ಮೀಸಲಾದ ಕೀರ್ತನೆಗಳು:

'ದೇವಿ ಜಗಜ್ಜನನೀ' ಕೀರ್ತನೆಯು ಶಂಕರಾಭರಣ ರಾಗ, ಆದಿ ತಾಳ

'ಪಾಹಿಮಾಂ ಶ್ರೀವಾಗೀಶ್ವರಿ' ಕೀರ್ತನೆಯು ಕಲ್ಯಾಣಿ ರಾಗ, ಆದಿ ತಾಳ

'ದೇವಿ ಪಾವನೇ' ಕೀರ್ತನೆಯು ಸಾವೇರಿ ರಾಗ, ಆದಿ ತಾಳ

'ಭಾರತೀ ಮಾಮವ' ಕೀರ್ತನೆಯು ತೋಡಿ ರಾಗ, ಆದಿ ತಾಳ

'ಜನನೀ ಮಾಮವಮೇಯೆ' ಕೀರ್ತನೆಯು ಭೈರವಿ ರಾಗ, ಮಿಶ್ರ ಚಾಪು ತಾಳ

'ಸರೋರುಹಾಸನ ಜಾಯೇ' ಕೀರ್ತನೆಯು ಪಂತುವರಾಳಿ ರಾಗ, ಆದಿ ತಾಳ

ಪಾರ್ವತಿ ದೇವಿಗೆ ಮೀಸಲಾದ ಕೀರ್ತನೆಗಳು:

'ಜನನೀ ಪಾಹಿ ಸದಾ' ಕೀರ್ತನೆಯು ಶುದ್ಧ ಸಾವೇರಿ ರಾಗ, ಮಿಶ್ರ ಚಾಪು ತಾಳ

'ಪಾಹಿ ಜನನೀ ಸಂತತಂ ' ಕೀರ್ತನೆಯು ನಾಟಕುರಂಜಿ ರಾಗ, ಮಿಶ್ರ ಚಾಪು ತಾಳ

'ಪಾಹಿ ಪರ್ವತ ನಂದಿನಿ' ಕೀರ್ತನೆಯು ಆರಭಿ ರಾಗ, ಮಿಶ್ರ ಚಾಪು ತಾಳ

ಮತ್ತೊಂದು ಪ್ರಮುಖ ಅಂಶವೆಂದರೆ ಶ್ರೀ ಸ್ವಾತಿ ತಿರುನಾಳ್‌ರು ಶ್ರೀಮದ್ಭಗವದ್ಗೀತೆಯಿಂದ, (ಭಕ್ತಿ ಯೋಗ, ವಿಭೂತಿ ಯೋಗ) ಅದರಲ್ಲೂ 12ನೇ ಅಧ್ಯಾಯವಾದ **'ಭಕ್ತಿಯೋಗ'**ದಿಂದ ಪ್ರಭಾವಿತರಾಗಿರುವುದು ಅವರ **'ನವರತ್ನ ಮಾಲಿಕೆ'**ಯಿಂದ ಪುಷ್ಟೀಕರಿಸುತ್ತದೆ. ಒಂಭತ್ತು ವಿಧದ ಭಕ್ತಿ ಮಾರ್ಗವನ್ನು ಅವರ **'ನವರತ್ನ ಮಾಲಿಕೆ'**ಯು ಸುಸ್ಪಷ್ಟವಾಗಿ ಸಾರುತ್ತದೆ ಹಾಗೂ ವಿವರಗಳು ಈ ಕೆಳಕಂಡಂತಿವೆ:

ಶ್ರವಣ	'ಭವದಿಯಾ ಕಥ' ಕೀರ್ತನೆಯು ಭೈರವಿ ರಾಗ, ಆದಿ ತಾಳ
ಕೀರ್ತನ	'ತವಕನ ಮನಿ' ಕೀರ್ತನೆಯು ಕೇದಾರಗೌಳ ರಾಗ, ಝಂಪತಾಳ
ಸ್ಮರಣ	'ಸತತಂ ಸಂಸ್ಮರೋನಿಹ' ಕೀರ್ತನೆಯು ನೀಲಾಂಬರಿ ರಾಗ, ಅಟ್ಟ ತಾಳ
ಪಾದಸೇವನ	'ಪಂಕಜಾಕ್ಷ' ಕೀರ್ತನೆಯು, ತೋಡಿ ರಾಗ, ರೂಪಕ ತಾಳ
ಅರ್ಚನ	'ಆರಾಧಯಾಮಿ' ಕೀರ್ತನೆಯು ಬಿಲಹರಿ ರಾಗ, ಅಟ್ಟ ತಾಳ
ವಂದನ	'ವಂದೇ ದೇವದೇವ' ಕೀರ್ತನೆಯು ಬೇಗಡೆ ರಾಗ, ಝಂಪತಾಳ
ದಾಸ್ಯ	'ಪರಮ ಪುರುಷ' ಕೀರ್ತನೆ, ಆಹಿರಿ ರಾಗ, ಅಟ್ಟತಾಳ

ಸಖ್ಯ 'ಭವತೋ ವಿಶ್ವಸೋ' ಕೀರ್ತನೆ, ಮುಖಾರಿ ರಾಗ, ಅಟ್ಟತಾಳ
ಆತ್ಮ ನಿವೇದನ 'ದೇವದೇವ ಕಲಯಾಮಿ' ಕೀರ್ತನೆ, ನಾದನಾಮಕ್ರಿಯ ರಾಗ, ರೂಪಕ ತಾಳ

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥

ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮ ನಿವೇದನ–ಇವು ಮೋಕ್ಷ ಸಾಧನಾ ಮಾರ್ಗದಲ್ಲಿ ಭಕ್ತನಿಗೆ ಮುಖ್ಯವಾದವುಗಳು. ಶ್ರೀ ಸ್ವಾತಿ ತಿರುನಾಳರು ತಮ್ಮ ಕೃತಿ ಹಾಗೂ ರಾಗಗಳಿಂದ ಭಕ್ತಿ ಮಾರ್ಗವನ್ನು ಸಗುಣೋಪಾಸನೆಯ ಮೂಲಕ ಹಂತ–ಹಂತವಾಗಿ ಈ ಕೆಳಕಂಡಂತೆ ಪರಾಕಾಷ್ಠೆಗೆ ಒಯ್ಯಲು ಪ್ರಯತ್ನಿಸುತ್ತಾರೆ.

ಭಗವಂತನ ನಿತ್ಯಧಾಮದಲ್ಲಿ ವಾಸಿಸುವುದು, ಭಗವಂತನಂತೆಯೇ ಐಶ್ವರ್ಯವನ್ನು ಹೊಂದು, ಸದಾ ಭಗವಂತನ ಸಾಮೀಪ್ಯ ಇರುವುದು, ಭಗವಂತನಂತೆಯೇ ರೂಪ ಹೊಂದುವುದು, ಭಗವಂತನ ವಿಗ್ರಹದಲ್ಲಿ ಸೇರಿ ಹೋಗು, ಅವನೊಂದಿಗೆ ಒಂದಾಗು ಅರ್ಥಾತ್ ಬ್ರಹ್ಮ ರೂಪನಾಗುವುದು. ಇದರಲ್ಲಿ ಮುಖ್ಯವಾಗಿ ಕಡೆಯದಾದ ಆತ್ಮ ನಿವೇದನೆ ಅಂದರೆ ಭಕ್ತನು ಭಗವಂತನಿಗೆ ತನ್ನನೇ ಸಮರ್ಪಿಸಿಕೊಳ್ಳುವುದು. 'ನಾನು' ಎಂಬ ಅಹಂಕಾರ ವರ್ಜಿಸಿ ಸಕಲಕ್ಕೂ ಪ್ರೇರಕ, ಪೋಷಕ, ಆ ಭಗವದ್ ಶಕ್ತಿ ಮಾತ್ರ ಎಂಬ ಮನೋಭಾವ ಮೂಡಿಬರಬೇಕು. ಸರ್ವಕ್ಕೂ ಭಗವಂತನೇ ಕಾರ್ಯ, ಕಾರಣನು, ತಾನು ಕೇವಲ ನಿಮಿತ್ತ ಮಾತ್ರ ಎಂಬ ಆಂತರ್ಯದ ಜಾಗೃತಿ ಮೂಡಿ ಭಕ್ತನಲ್ಲಿ ದೃಢ ನಿಲುವುವನ್ನು ಮೂಡಿಸುವಲ್ಲಿ ಈ **'ನವರತ್ನ ಮಾಲಿಕೆ'** ಗಳು ಸಾಫಲ್ಯವನ್ನು ಕಂಡಿವೆ.

ಸ್ವಾತಿ ತಿರುನಾಳರು ಸ್ವತಃ 'ಸ್ವರಬತ್' ಎಂಬ ತಂತಿ ವಾದ್ಯವನ್ನು ನುಡಿಸುವುದರಲ್ಲಿ ನೈಪುಣ್ಯತೆ ಹೊಂದಿದ್ದರು ಎಂಬುದು ವೇದ್ಯವಾಗಿದೆ ಅಲ್ಲದೆ ಅವರು ಅತ್ಯುತ್ತಮ ವಾಗ್ಗೇಯಕಾರರಾಗಿದ್ದರು, ಮತ್ತು ಅವರ ಕೆಲವೊಂದು ಕೃತಿಗಳು ಇನ್ನೂ ಮುದ್ರಣವನ್ನು ಕಂಡಿಲ್ಲ. ಕರ್ನಾಟಕ ಸಂಗೀತಕ್ಕೆ ತಂತಿ ವಾದ್ಯವಾದ ಪಿಟೀಲನ್ನು ಅಳವಡಿಸುವ ಸಾಧ್ಯತೆಯನ್ನು ಕಂಡುಕೊಂಡವರಲ್ಲಿ ಸ್ವಾತಿ ತಿರುನಾಳರು ಮೊದಲಿಗರು ಎಂಬುದು ಗಮನಾರ್ಹ ಅಂಶ.

<u>ಇವರ ರಾಗಮಾಲಿಕೆಗಳಲ್ಲಿ ಮತ್ತು ಕೀರ್ತನೆಗಳಲ್ಲಿ ಭಕ್ತಿ ಮಾರ್ಗ:</u>

ಇವರ ಆರಾಧ್ಯ ದೈವವಾದ ಶ್ರೀಅನಂತಪದ್ಮನಾಭನ ಪ್ರಭಾವ ಇವರ ಮೇಲೆ ಅಪಾರವಾಗಿತ್ತೆಂಬುದು ಇವರ ರಾಗ ಮಾಲಿಕೆಗಳಲ್ಲಿ ಕಂಡು ಬರುತ್ತವೆ ಹಾಗೂ ಅವುಗಳನ್ನು ವೈವಿಧ್ಯಮಯ ರೀತಿಯನ್ನು ರಚಿಸಿ ತನ್ನ ಸ್ವಾಮಿಗೆ ಅರ್ಪಿಸಿದ್ದಾರೆ. ಅವುಗಳಲ್ಲಿ 'ಕಮಲಾಜಸ್ಯ' ಎಂಬ ದಶರಾಗ ಮಾಲಿಕೆಯು ವಿಷ್ಣುವಿನ ದಶಾವತಾರವನ್ನು, ಸಪ್ತರಾಗ ಮಾಲಿಕೆ ಮುಖೇನ 'ಭಾವಯಾಮಿ ರಘುರಾಮಂ' ಸಮಗ್ರ ರಾಮಾಯಣವನ್ನು, ಸಂಕ್ಷಿಪ್ತ ರಾಮಾಯಣ ಕೀರ್ತನೆಯಾದ 'ಯೋಜಯ ಸಾಧಯ' ಮತ್ತು 'ಸಾನಂ–ತಂ' ಎಂಬ ಚತುರ್ರಾಗ ಮಾಲಿಕೆ, ಪಂಚರಾಗ ಸ್ವರಜತಿಯಲ್ಲಿ 'ಸಾರಸಭವ ಧೃತಪದ', ಭಾಗವತ ತಿರುಳಿರುವ 'ಭಾವಯೇ ಶ್ರೀಗೋಪಾಲಂ' ಕೀರ್ತನೆ, ಅಷ್ಟ ರಾಗ ಮಾಲಿಕೆಯಲ್ಲಿ 'ಪನ್ನಗೇಂದ್ರ ಶಯನ' , ಪಂಚರಾಗ ತಾನವರ್ಣದ 'ಸುಮಸಾಯಕ', ಹಾಗೂ ಇನ್ನಿತರೆ ಕೃತಿಗಳಾದ ಭಕ್ತಿ ಮಂಜರಿ, ಸ್ವನಂದುರಪುರವರ್ಣನ ಪ್ರಬಂಧಂ, ಪದ್ಮನಾಭಾಷ್ಟಕಂ, ಮೂಹನಪ್ರಾಸ–ಅಂತ್ಯಪ್ರಾಸ ವ್ಯವಸ್ಥಾ, ಅಜಾಮಿಳ–ಕುಚೇಲ ಉಪಾಖ್ಯಾನ, ಉತ್ಸವ ವರ್ಣನ ಪ್ರಬಂಧ, ಮುಂತಾದವು.

ಹಿಂದೂಸ್ಥಾನಿ ಸಂಗೀತದಲ್ಲಿ ಆಸಕ್ತಿ ಮತ್ತು ಪ್ರೌಢಿಮೆ:

ಕರ್ನಾಟಕ ಶಾಸ್ತ್ರೀಯ ಸಂಗೀತವಲ್ಲದೇ, ಹಿಂದೂಸ್ಥಾನಿ ಸಂಗೀತದಲ್ಲಿ ಇವರಿಗೆ ಪ್ರೌಢ ಪಾಂಡಿತ್ಯವಿರುವುದು ಇವರ 37 ಹಿಂದೂಸ್ಥಾನಿ ರಚನೆಗಳಲ್ಲಿ ಕಂಡು ಬರುತ್ತದೆ. ಹಾಗಾಗಿ ದ್ರುಪದ್, ಧಮಾರ್, ಖ್ಯಾಲ್, ಟಪ್ಪಾಠುಮ್ರಿ ರಾಗಮಾಲಿಕೆಗಳಲ್ಲಿ ಇವರ ಕೆಲವು ರಚನೆಗಳನ್ನು ಕಾಣಬಹುದಾಗಿದೆ. ದಕ್ಷಿಣ ಭಾರತದ ವಾಗ್ಗೇಯಕಾರರಲ್ಲಿ ಹಿಂದೂಸ್ಥಾನಿ ಸಂಗೀತದ ರಚನೆ ಸೃಷ್ಟಿಸಿರುವುದರಲ್ಲಿ ಸ್ವಾತಿ ತಿರುನಾಳರು ಪ್ರಥಮರು ಎನ್ನಬಹುದು.

ಸಂಗೀತ ಕ್ಷೇತ್ರದ ಅಭಿವೃದ್ಧಿ ಹಾಗೂ ಸಂಗೀತಜ್ಞರಿಗೆ ರಾಜಾಶ್ರಯ:

ಈ ಕಲಾತಪಸ್ವಿ ಇತರೆ ಕಲಾಪ್ರತಿಭೆಗಳನ್ನು ಗುರುತಿಸಿ ಅವರಿಗೆ ಉತ್ತೇಜನ ಹಾಗೂ ಸಹಾಯ ಹಸ್ತ ನೀಡುತ್ತಿದ್ದರು ಹಾಗೂ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಇಲ್ಲಿನ ವಿದ್ವಾಂಸರನ್ನು ಕರೆಸಿ ಸನ್ಮಾನಿಸುತ್ತಿದ್ದರು. ಇವರು ಚಾಲ್ತಿಯಲ್ಲಿದ್ದ ಸಂಗೀತ ಪದ್ಧತಿಯ ಮಾಧುರ್ಯವನ್ನು ಉತ್ತಮಗೊಳಿಸುವಿಕೆ ಮಾತ್ರವಲ್ಲದೆ, ದೇಶದ ಇನ್ನಿತರೆ ಸಂಗೀತ ಪದ್ಧತಿಗಳ ಉತ್ತಮ ಗುಣಗಳನ್ನು ಆಯ್ದುಕೊಂಡು ವಿನೂತನವಾದ ಭಾರತೀಯ ಸಂಗೀತ ಪದ್ಧತಿಯನ್ನು ಹುಟ್ಟುಹಾಕಬೇಕೆಂಬ ಇಚ್ಛೆಯನ್ನೂ ಸಹ ಹೊಂದಿದ್ದರು ಎಂಬ ಅಂಶ ಸಂಗೀತ ಕುರಿತಾದ ಇವರ ಕಾರ್ಯ ಯೋಜನೆಗಳಿಂದ ತಿಳಿದು ಬರುತ್ತದೆ.

ಇವರ ಆಸ್ಥಾನದಲ್ಲಿ ಹಲವು ಶ್ರೇಷ್ಠ ಸಂಗೀತಜ್ಞರು ಇದ್ದರು ಹಾಗೂ ಅವರಿಗೆ ಆಶ್ರಯದಾತರಾಗಿದ್ದರು; ಅವುಗಳಲ್ಲಿ ಪೊನ್ನಯ್ಯ, ಚಿನ್ನಯ್ಯ, ಶಿವಾನಂದಂ, ವಡಿವೇಲು, ಕನ್ನಯ್ಯ ಭಾಗವತರ್, ರವಿವರ್ಮನ್ ತಂಬಿ, ತಂಜಾವೂರು ಚಿಂತಾಮಣಿ, ಕ್ಷೀರಾಬ್ಧಿ ಶಾಸ್ತ್ರಿ, ಷಟ್ಕಾಲ ಗೋವಿಂದ ಮಾರಾರ್, ಚೋಳಪುರಂ ರಘುನಾಥರಾವ್, ಸುಬ್ಬಕುಟ್ಟಿ ಅಯ್ಯ ತಂಜಾವೂರು ರಂಗೈಂಗಾರ್ಯ, ಸುಲೇಮಾನ್ ಸಾಹೇಬ್, ಅನಂದಪದ್ಮ ಗೋಸ್ವಾಮಿ, ಮುಂತಾದವರು.

ಇವರ ಇತರೆ ಸಾಧನೆಗಳು:

ಸಂಗೀತ ಕ್ಷೇತ್ರ ಮಾತ್ರವಲ್ಲದೆ, ಸಂಸ್ಥಾನದ ಆಡಳಿತದಲ್ಲಿಯೂ ಸಹ ಇವರ ಇತರೆ ಸಮಕಾಲೀನ ರಾಜರುಗಳಿಗಿಂತಲೂ ಮುಂದಿದ್ದರು. ಶಿಕ್ಷಣದಲ್ಲಿ ಆಂಗ್ಲ ಭಾಷಾ ಮಾಧ್ಯಮದ ಜಾರಿ, ತಾರಾ ವೀಕ್ಷಣಾಲಯದ ಸ್ಥಾಪನೆ, ಪ್ರಥಮ ಸರ್ಕಾರಿ ಮುದ್ರಣಾಲಯ, ತಾಳೆಗರಿ, ಗ್ರಂಥಗಳ ಪ್ರಥಮ ಗ್ರಂಥಾಲಯ, ನ್ಯಾಯಾಂಗದ ಮೇಲ್ದರ್ಜೆ, ಉತ್ತಮವಾದ ನಾಗರೀಕ ಸಂಹಿತೆ ಮುಂತಾದವುಗಳು ಇವರು ಕೈಗೊಂಡ ಪುರೋಭಿವೃದ್ಧಿ ಯೋಜನೆಗಳು ತಿರುವಾಂಕೋರು ಸಂಸ್ಥಾನವನ್ನು ಮಾದರಿಯನ್ನಾಗಿಸಿತು.

ಇಂತಹ ಸಂಗೀತ ಕ್ಷೇತ್ರದ ಧ್ರುವ ತಾರೆ ಹಾಗೂ ದಿಗ್ಗಜರಾದ ಶ್ರೀ ಸ್ವಾತಿ ತಿರುನಾಳ್‌ರು ತಮ್ಮ 34ನೇ ವಯಸ್ಸಿನಲ್ಲಿಯೇ **25ನೇ ಡಿಸೆಂಬರ್ 1846ರಂದು** ಸಂಗೀತ ಮಾತೆ ಸರಸ್ವತಿಯ ಪಾದಗಳಲ್ಲಿ ಲೀನವಾಗಿ ಹೋದರು. ಇಂತಹ ಕಲಾ ತಪಸ್ವಿಯು ಅನಂತದಲ್ಲಿ ಅಸ್ತಂಗತರಾಗಿ 169 ವರ್ಷಗಳಾದ ಹಿನ್ನೆಲೆಯಲ್ಲಿ, ಸಂಗೀತದ ಮಹಾಚೇತನಕ್ಕೆ ಈ ಅಕ್ಷರ ನಮನ ಸಮರ್ಪಣೆ.

(ಡಾ॥ ಎಸ್.ಸಿ. ಶರ್ಮ)
ಶಿಕ್ಷಣ ತಜ್ಞರು

ಗ್ರಂಥ ಪರಾಮರ್ಶನ:

1) ಶ್ರೀಮದ್ಭಗವದ್ಗೀತೆ, 12ನೇ ಅಧ್ಯಾಯ, ಭಕ್ತಿಯೋಗ, ಗೀತಾ ಪ್ರೆಸ್, ಗೋರಖ್‌ಪುರ
2) ಶ್ರೀ ಭಾಗವತ, 13ನೇ ಶ್ಲೋಕ, 29ನೇ ಅಧ್ಯಾಯ, ಭಕ್ತಿಯೋಗದ ಮರ್ಮ ಹಾಗೂ ಕಾಲದ ಮಹಿಮೆ, ಗೀತಾ ಪ್ರೆಸ್, ಗೋರಖ್‌ಪುರ
3) ಸಂಗೀತ ಲಕ್ಷಣ ಸಂಗ್ರಹ–2, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ
4) ವೆಬ್‌ಸೈಟ್ ಸ್ವಾತಿತಿರುನಾಳ್.ಓಆರ್‌ಜಿ, ಸಂಸ್ಕೃತಿ ಇಲಾಖೆ, ಕೇರಳ ಸರ್ಕಾರ 5) ಗೂಗಲ್ ವಿಕಿಪಿಡಿಯಾ

ನಾದ ಬ್ರಹ್ಮ, ನಾದ ಜ್ಯೋತಿ ಶ್ರೀ ಮುತ್ತು ಸ್ವಾಮಿ ದೀಕ್ಷಿತರ ಕೃತಿಗಳಲ್ಲಿ 'ಪ್ರಕೃತಿ' ಅಥವಾ ನಿಸರ್ಗಾರಾಧನೆಯ ವೈಶಿಷ್ಟ್ಯ

ಶ್ರೀ ಮುತ್ತು ಸ್ವಾಮಿ ದೀಕ್ಷಿತರು ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಒಂದು ಅಜರಾಮರ ತಾರೆ. ಅಂದಾಜು 400 ರಿಂದ 500 ಕೃತಿಗಳು ರಚಿಸಿರಬಹುದೆಂದು, ಮತ್ತು ಹೆಚ್ಚಿನವು ಸಂಸ್ಕೃತದ ಕೃತಿ ರೂಪದಲ್ಲಿದ್ದು ಅವು ಸಂಗೀತಕ್ಕೆ ಹೊಂದಬಹುದಾದ ಕಾವ್ಯ ರೂಪದಲ್ಲಿದೆ ಎಂದು ವಿಶ್ಲೇಷಿಸಲಾಗಿದೆ. ತಮ್ಮ ಜೀವನದುದ್ದಕ್ಕೂ ದೀಕ್ಷಿತರು ದೇಶದ ಉದ್ದಗಲಕ್ಕೆ ಸಂಚರಿಸಿ ಬಹುತೇಕ ಎಲ್ಲಾ ಪವಿತ್ರ ಯಾತ್ರಾ ಸ್ಥಳಗಳನ್ನು ಸಂದರ್ಶಿಸಿ ಆಯಾ ದೇಗುಲ ಹಾಗೂ ಅಧಿದೇವತೆಗಳ ಹಿನ್ನೆಲೆ, ಸ್ಥಳ ಚರಿತ್ರೆ, ಆಚರಣೆಯಲ್ಲಿದ್ದ ಸಂಪ್ರದಾಯ, ಪದ್ಧತಿಗಳು ಪ್ರಾಚೀನ ವೃಕ್ಷಗಳು, ಇವುಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಕೃತಿಗಳನ್ನು ರಚಿಸಿ ಸಮರ್ಪಿಸಿದ್ದಾರೆ. ಪ್ರಾಯಶಃ ಹಿಂದೂ ದೇವತೆಗಳ ಕುರಿತು ದೀಕ್ಷಿತರಷ್ಟು ಕೃತಿಗಳನ್ನು ರಚಿಸಿರುವವರು ಬೇರೆ ಯಾವ ವಾಗ್ಗೇಯಕಾರರು ಇರಲಾರರೆಂದು ನಂಬಲಾಗಿದೆ.

ಇವರ ಕೃತಿಗಳಲ್ಲಿ ಪ್ರಕೃತಿ ಅಥವಾ ನಿಸರ್ಗಾರಾಧನೆಯ ವೈಶಿಷ್ಟ್ಯ:

ಶ್ರೀ ಮುತ್ತು ಸ್ವಾಮಿ ದೀಕ್ಷಿತರು ನಿಸರ್ಗ ಅಥವಾ ಪ್ರಾಕೃತಿಕ ಶಕ್ತಿಗಳಾದ ಅಗ್ನಿ, ವಾಯು, ಜಲ, ಪೃಥ್ವಿ, ಆಕಾಶ, ಮನಸ್ಸು, ಅಹಂಕಾರ, ದಿಕ್ಪಾಲಕರು, ಗ್ರಹಗಳು, ಹಾಗೂ ಅವುಗಳಲ್ಲಿ ಸಮ್ಮಿಳಿತವಾಗಿರುವ ಅಗೋಚರ ದೈವೀ ಶಕ್ತಿ, ಪ್ರತಿನಿಧಿಸುವ ಅಧಿದೇವತೆ ಹಾಗೂ ಇವೆಲ್ಲವನ್ನು ನಿಯಂತ್ರಿಸುವ ನಿಯಂತೃ ಅಥವಾ ಮಹಾ ಪ್ರಜ್ಞೆ, ಇವುಗಳಿಂದ ಹೆಚ್ಚು ಪ್ರಭಾವಿತರಾದಂತೆ ಹಾಗೂ ಬ್ರಹ್ಮಾಂಡದಲ್ಲಿನ ಪ್ರಕೃತಿ–ಪುರುಷ ತತ್ವಗಳು ಮತ್ತು ದೈವೀ ಶಕ್ತಿಗಳ ವಿಸ್ಮಯಕಾರಿ ಲೀಲೆ ಹಾಗೂ ಮನುಷ್ಯನ ಇಂದ್ರಿಯ, ಮನೋ–ಬುದ್ಧಿಗಳ ಮೇಲೆ ಅಸಾಧಾರಣ ಪ್ರಭಾವ ಮುಂತಾದವುಗಳು ಇವರ ಕೃತಿಗಳನ್ನು ಅವಲೋಕಿಸಿದಾಗ ಕಂಡು ಬರುವ ಪ್ರಮುಖ ಅಂಶ.

ಅವರ **'ನವಗ್ರಹ ಕೃತಿ'**ಗಳಲ್ಲಿ:

ಸೌರಾಷ್ಟ್ರ ರಾಗ, ಚತುರಶ್ರ ಜಾತಿ ಧ್ರುವ ತಾಳದ 'ಸೂರ್ಯ ಮೂರ್ತೇ ಸುಂದರ ಛಾಯಾಧಿಪತೇ', ಅಸಾವರಿ ರಾಗ, ಚತುರಶ್ರ ಜಾತಿ ಮಧ್ಯ ತಾಳದ 'ಚಂದ್ರಂ ಭಜ ಮಾನಸ', ಸುರಟಿ ರಾಗ ರೂಪಕ ತಾಳದ 'ಅಂಗಾರಕಂ ಆಶ್ರಯಾಮ್ಯಹಂ', ನಾಟ ಕುರಂಜಿ ರಾಗ ಮಿಶ್ರ ಜಾತಿ ಝಂಪೆ ತಾಳದ 'ಬುಧಮಾಶ್ರಯಾಮಿ ಸತತಂ', ಅಠಾಣ ರಾಗ ತ್ರಿಸ್ರ ಜತಿ ತ್ರಿಪುಟ ತಾಳದ 'ಬೃಹಸ್ಪತಿ ತಾರಾಪತೇ' ಫರಜು ರಾಗ, ಚತುರಸ್ರ ಜಾತಿ ಆಟ ತಾಳದ 'ಶ್ರೀ ಶುಕ್ರ ಭಗವಂತಂ', ಯದುಕುಲ ಕಾಂಭೋಜಿ ರಾಗ, ಚತುರಸ್ರ ಜತಿ ಏಕ ತಾಳದ 'ದಿವಾಕರ ತನುಜಂ', ರಾಮ ಮನೋಹರಿ ಅಥವಾ ರಾಮಪ್ರಿಯ ರಾಗ, ರೂಪಕ ತಾಳದ 'ಸ್ಮರಾಮ್ಯಹಂ ಸದಾ ರಾಹುಂ', ಷಣ್ಮುಖ ಪ್ರಿಯ ರಾಗ, ರೂಪಕ ತಾಳದ 'ಮಹಾಶೂರಂ ಕೇತುಮಖಂ' ಕ್ರಮವಾಗಿ ಸೂರ್ಯ ಭಗವಾನ್, ಸೋಮ ಅಥವಾ ಚಂದ್ರನನ್ನು, ಅಂಗಾರಕ ಅಥವಾ ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು–ಕೇತುವನ್ನು ಕುರಿತಾಗಿದೆ.

ಪುರುಷ ಶಕ್ತಿಯ ಪ್ರತೀಕ ಶಿವ, ರುದ್ರರ ಕುರಿತು:

ಇವರ **'ಪಂಚಭೂತಸ್ಥಳ ಲಿಂಗ ಕೃತಿ'**ಗಳು ಹಾಗೂ **'ಪಂಚಲಿಂಗ ಕೃತಿ'**ಗಳು ಶಿವ ಹಾಗೂ ಅವನ ವೈವಿಧ್ಯಮಯ ಅವತಾರಗಳ ಕುರಿತಾಗಿದ್ದರೂ ಸಹ ಅವುಗಳ ಆಂತರ್ಯವು ಪ್ರಕೃತಿಯಲ್ಲಿನ ಮೂಲ ಅಂಶ ಹಾಗೂ ತತ್ವಗಳನ್ನು ಕುರಿತದ್ದೇ ಆಗಿದೆ. ಚಿದಂಬರಂ ಕ್ಷೇತ್ರದ ಕುರಿತಾದ 'ಆನಂದನಟನ ಪ್ರಕಾಶಂ' ಕೃತಿಯು (ಕೇದಾರ ರಾಗ, ಮಿಶ್ರ ಚಾಪು ತಾಳ), ಶ್ರೀಕಾಳಹಸ್ತಿ ಕ್ಷೇತ್ರ ಕುರಿತಾದ 'ಶ್ರೀಕಾಳಹಸ್ತೀಶ' ಕೃತಿಯು (ಹುಸೈನಿ ರಾಗ, ಝಂಪು ಅಥವಾ ಖಂಡ ಚಾಪು ತಾಳ), ತಿರುವಣ್ಣಾಮಲೈ ಕ್ಷೇತ್ರ ಕುರಿತಾದ 'ಅರುಣಾಚಲ ನಾಥಂ' (ಸಾರಂಗ ರಾಗ, ರೂಪಕ ತಾಳ), ಕಾಂಚೀಪುರಂ ಕ್ಷೇತ್ರ ಕುರಿತಾದ 'ಚಿಂತಯ ಮಾಕಂದ ಮೂಲಕಂದಂ' (ಭೈರವಿ ರಾಗ, ರೂಪಕ ತಾಳ), ತಿರುವಾನೈಕಾವಲ್ ಕ್ಷೇತ್ರ ಕುರಿತಾದ 'ಜಂಬೂಪತೇ' (ಯಮುನಾ ಕಲ್ಯಾಣಿ ರಾಗ, ತಿಸ್ರ ಏಕ ತಾಳ) ಕ್ರಮವಾಗಿ ಆಕಾಶ ಲಿಂಗ, ವಾಯು ಲಿಂಗ, ಅಗ್ನಿ ಲಿಂಗ, ಪೃಥ್ವಿ ಲಿಂಗ, ಜಲ ಲಿಂಗ–ಇವುಗಳನ್ನು ಕುರಿತಾಗಿದೆ.

ಇನ್ನು ದೀಕ್ಷಿತರ ಪಂಚಲಿಂಗ ಕೃತಿಗಳಾದ 'ಸದಾಚಲೇಶ್ವರಂ ಭಾವಯೇಹಂ' (ಭೂಪಾಲಂ ರಾಗ), 'ಹಾಟಕೇಶ್ವರ ಸಂರಕ್ಷಮಾಮ್' (ಬಿಲಹರಿ ರಾಗ, ಮಿಶ್ರ ಏಕ ತಾಳ), 'ಶ್ರೀವಲ್ಮೀಕ ಲಿಂಗಂ ಚಿಂತಯೇ ಶಿವಾರ್ಧಾಂಗಂ' (ಕಾಂಭೋಜಿ ರಾಗ, ಅಟ್ಟ ತಾಳ), 'ಆನಂದೇಶ್ವರೇಣ ಸಂರಕ್ಷಿತೋಹಂ' (ಆನಂದ ಭೈರವಿ ರಾಗ, ಮಿಶ್ರ ಏಕ ತಾಳ), 'ಸಿದ್ಧೇಶ್ವರಾಯ ನಮಸ್ತೇ' (ನೀಲಾಂಬರಿ ರಾಗ, ಮಿಶ್ರ ಏಕ ತಾಳ), ಇವುಗಳು ತಿರುವಾರೂರ್ ಕ್ಷೇತ್ರದ ಶಿವನಿಗೆ ಅರ್ಪಿತವಾಗಿ ಅವನ ವಿವಿಧ ಅವತಾರಗಳಿಗೆ ಸಂಬಂಧಿಸಿದ್ದಾಗಿದೆ. ಅಲ್ಲದೆ ತಂಜಾವೂರಿನ ಬೃಹದೇಶ್ವರನ ಕುರಿತಾಗಿ 8 ಕೃತಿಗಳು ಹಾಗೂ ಚಿದಂಬರಂನ ಕುರಿತಾಗಿ 6 ನಟರಾಜ ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿ ಶಿವನ ಎಲ್ಲಾ ರೂಪಗಳು ವೈವಿಧ್ಯಮಯ 'ಪುರುಷ' ತತ್ವವನ್ನು ಪ್ರತಿನಿಧಿಸುತ್ತದೆ ಹಾಗೂ ಶಿವನು 'ಮನೋ ನಿಯಾಮಕ' ದೇವತೆಯಾಗಿ ಪ್ರತಿಬಿಂಬಿತವಾಗಿದೆ.

ಗಣಪತಿ–'ಆಕಾಶ' ತತ್ವ ಪ್ರತೀಕ:

ದೀಕ್ಷಿತರು ತಮ್ಮ ಪರ್ಯಟನ ಕಾಲದಲ್ಲಿ ವಿವಿಧ ಕ್ಷೇತ್ರಗಳಿಗೆ ಭೇಟಿಯಿತ್ತ ಸಂದರ್ಭದಲ್ಲಿ ಆಯಾ ದೇಗುಲಗಳ ಕಲಾ ವೈಭವ, ಪರಿಸರ ಇವುಗಳಿಂದ ಪ್ರಭಾವಿತರಾಗಿ ಅದರಲ್ಲೂ ಮುಖ್ಯವಾಗಿ ಮಧುರೈ, ತಿರುಚ್ಚಿ, ಮಾಯಾವರಂ, ತಿರುವಾರೂರ್, ಕೇರಳ, ವೈದೀಶ್ವರ ಕೋಯಿಲ್, ಕಾಂಚಿ, ಮೂಲಾಧಾರ ಗಣಪತಿ, ತಿರುವಾಲಾಂಚುಳಿ ಮುಂತಾದವುಗಳಲ್ಲಿರುವ ವಿನಾಯಕನನ್ನು ಕುರಿತಾಗಿ ಸುಮಾರು 26 ಕೃತಿಗಳನ್ನು ರಚಿಸಿರುತ್ತಾರೆ. ಇಲ್ಲಿ ಪ್ರಮುಖ ಅಂಶವೆಂದರೆ ವಿನಾಯಕ **'ಆಕಾಶ'** ತತ್ವಕ್ಕೆ ಅಭಿಮಾನಿ ದೇವತೆ ಎಂದು ಪರಿಗಣಿಸಲ್ಪಟ್ಟಿದೆ. ಬಹುಶಃ ವಿಘ್ನೇಶ್ವರನನ್ನು ಕುರಿತಾಗಿ ಮುತ್ತುಸ್ವಾಮಿ ದೀಕ್ಷಿತರಷ್ಟು ಕೃತಿಗಳನ್ನು ರಚಿಸಿರುವ ವಾಗ್ಗೇಯಕಾರರು ಮತ್ತೊಬ್ಬರಿರಲಾರರು.

ದೇವಿ ಅಥವಾ ಪ್ರಕೃತಿ ತತ್ವ ಪ್ರತೀಕ ಕುರಿತು:

ವಿಶೇಷವೆಂದರೆ ಆಯಾ ಕ್ಷೇತ್ರದ ದೇವತೆಗಳಿಗೆ ದೀಕ್ಷಿತರು ಎಲ್ಲೆಲ್ಲಿ 'ಪುರುಷ' ತತ್ವಗಳನ್ನು ಕುರಿತಾಗಿ ಕೃತಿಗಳನ್ನು ರಚಿಸಿದ್ದಾರೋ ಹಾಗೆಯೇ ಪರ್ಯಾಯವಾಗಿ 'ಪ್ರಕೃತಿ'ಯನ್ನು ಕುರಿತಾಗಿಯೂ ಸಹ ಕೃತಿಗಳನ್ನು ರಚಿಸಿದ್ದಾರೆ. ಉದಾ:

ತಂಜಾವೂರಿನ ಬೃಹದೇಶ್ವರಿ ದೇವಿ ಕುರಿತು 13 ಕೃತಿಗಳು, ಚಿದಂಬರಂನ ಶಿವ–ಕಾಮೇಶ್ವರಿ ಕುರಿತಾಗಿ ಒಂದು ಕೃತಿ, ಕಾಶಿ ವಿಶಾಲಾಕ್ಷಿ ಅಥವಾ ಅನ್ನಪೂರ್ಣ ದೇವಿ ಕುರಿತಾಗಿ 4 ಕೃತಿಗಳು, ಶ್ರೀವೈದ್ಯನಾಥ ಕುರಿತಂತೆಯೇ ಬಾಲಾಂಬಿಕಾ 5 ಕೃತಿಗಳು, ಲಕ್ಷ್ಮಿ ದೇವಿ ಕುರಿತಾಗಿ 6 ಕೃತಿಗಳು, ಸರಸ್ವತಿ ದೇವಿ ಕುರಿತಾಗಿ 9 ಕೃತಿಗಳು, ಪಾರ್ವತಿ ದೇವಿ ಕುರಿತಾಗಿ 1 'ನಾಗೈಕರೋಣಂ' ಕೃತಿ, ಕುಂಭಕೋಣಂನ ಮಂಗಳಾಂಬಾ ಕುರಿತಾಗಿ 1 ಕೃತಿ, ಮಧುರೈ ಮೀನಾಕ್ಷಿ ಕುರಿತಾಗಿ 8

'ಮಧುರಾಂಬ ವಿಭಕ್ತಿ' ಕೃತಿಗಳು, ಕಂಚಿ ಕಾಮಾಕ್ಷಿ ಕುರಿತಾಗಿ 15 ಕಾಮಾಕ್ಷಿ ದೇವಿ ಕೃತಿಗಳು, 11 ಕಮಲಾಂಬ ನವಾವರ್ಣ ಕೃತಿಗಳು, ಇತ್ಯಾದಿ.

ಗುಹ ಅಥವಾ ಕುಮಾರಸ್ವಾಮಿ ಕುರಿತು:

ಮುತ್ತುಸ್ವಾಮಿ ದೀಕ್ಷಿತರು ಕುಮಾರಸ್ವಾಮಿಯನ್ನು ತಮಗೆ ಸಂಗೀತ ಜ್ಞಾನವನ್ನು ಕರುಣಿಸಿದ ಗುರುವೆಂದು ಪರಿಗಣಿಸಿ, ಗುರುಭಕ್ತಿ ಕುರುಹಾಗಿ ಮಾಯಾಮಾಳವಗೌಳ ರಾಗದಲ್ಲಿ 'ಶ್ರೀನಾಥಾದಿ ಗುರುಗುಹೋ' ಎಂದು ಪ್ರಥಮವಾಗಿ ರಚಿಸಿ ಅರ್ಪಿಸಿದ್ದಾರೆ. ತದನಂತರದ ತಮ್ಮ ಎಲ್ಲಾ ಕೃತಿಗಳಿಗೂ **'ಗುರುಗುಹ'**ವೆಂಬ ಅಂಕಿತವನ್ನು ನಮೂದಿಸಿದ್ದಾರೆ. ಗುಹ ಅಥವಾ ಷಣ್ಮುಖ ಕುರಿತಾಗಿ ಅವರು ಒಟ್ಟು 9 ಹಾಗೂ 22 ಕೃತಿ ಗುಚ್ಛಗಳ 'ಗುರುಗುಹ' ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಗುಹ ಅಥವಾ ಷಣ್ಮುಖ **'ಪೃಥ್ವಿ'** ತತ್ವಕ್ಕೆ ಅಭಿಮಾನಿ ದೇವತೆ.

ಒಮ್ಮೆ ದೀಕ್ಷಿತರು ತಮ್ಮ ಸಹೋದರನ ವಿವಾಹಕ್ಕಾಗಿ ಪ್ರಯಾಣಿಸುತ್ತಿರುವಾಗ ದಾರಿಯಲ್ಲಿ ಒಂದು ಗ್ರಾಮದ ಜನತೆ ಮಳೆ ಇಲ್ಲದೆ ಪರಿತಪಿಸುತ್ತಿರುವುದನ್ನು ಕಂಡು ಮನ ಕರಗಿ ಅಮೃತವರ್ಷಿಣಿ ರಾಗದಲ್ಲಿ 'ಆನಂದಾಮೃತ ವರ್ಷಿಣಿ' ಎಂಬ ಕೃತಿಯನ್ನು ಹಾಡಿ ವರ್ಷಗರೆಯುವಂತೆ ಮಾಡಿ ಮುಂದೆ ಸಾಗಿದರು. ತದನಂತರ ಮಳೆಯು ನಿಲ್ಲದಿರಲು ಏಟಿಯಾಪುರದ ರಾಜನ ಕೋರಿಕೆ ಮೇರೆಗೆ 'ಸ್ತಂಭಯ ಸ್ತಂಭಯ' ಎಂದು ಹಾಡಿ ಮಳೆ ನಿಲ್ಲಿಸಿದರೆಂದು ಪ್ರತೀತಿ ಇದೆ. ಇದು ಪ್ರಕೃತಿಯ ಮೇಲೆ ದೀಕ್ಷಿತರಿಗಿದ್ದ ಅಸಾಧಾರಣ ಹಿಡಿತವನ್ನು ತೋರಿಸುತ್ತದೆ.

ಮತ್ತೊಂದು ಸಂದರ್ಭದಲ್ಲಿ ಕೀವಲೂರಿನ ದೇವಸ್ಥಾನಕ್ಕೆ ದೀಕ್ಷಿತರು ಹೋದಾಗ ಗುಡಿಯು ಬಾಗಿಲು ಹಾಕಿದ್ದನ್ನು ನೋಡಿ ಶಂಕರಾಭರಣ ರಾಗದಲ್ಲಿ 'ಅಕ್ಷಯ ಲಿಂಗವಿಭೋ' ಎಂಬ ಕೃತಿ ಹಾಡಲಾಗಿ ದೇಗುಲದ ಬಾಗಿಲು ತಂತಾನೆ ತೆರೆದು ಇವರಿಗೆ ದರ್ಶನ ಲಭಿಸಿತೆಂದು ಹೇಳಲಾಗಿದೆ. ಇದರಿಂದ ಇವರು ನಾದೋಪಾಸನೆ ಮುಖೇನ ಪ್ರಕೃತಿ ಅಥವಾ ನಿಸರ್ಗಾರಾಧನೆಯಲ್ಲಿ ಅಪಾರ ಒಲವಿತ್ತು ಹಾಗೂ ಪ್ರಭುತ್ವವನ್ನು ಸಾಧಿಸಿದ್ದರು ಎಂಬ ಅಂಶವು ಸ್ಪಷ್ಟ ನಿರ್ದಶನಗಳೊಂದಿಗೆ ಬೆಳಕಿಗೆ ಬರುತ್ತದೆ.

ಪ್ರಮುಖವಾದ ಅಂಶವೆಂದರೆ ಪ್ರಕೃತಿ ಅಥವಾ ನಿಸರ್ಗವನ್ನು ಪ್ರತಿನಿಧಿಸುವ ಅಭಿಮಾನಿ ದೇವತೆಗಳಾದ ಶಿವ, ಪಾರ್ವತಿ, ಗಣಪತಿ, ಸ್ಕಂದ, ನಾರಾಯಣ, ಕೃಷ್ಣ, ಲಕ್ಷ್ಮಿ–ಸರಸ್ವತಿ, ಅಂಬಿಕೆ ಇತ್ಯಾದಿಗಳು 'ನಾದೋಪಾಸನೆ'ಯಿಂದ ಒಲಿಯುವರು ಹಾಗೂ ಪ್ರಣವ ನಾದವೇ ವೇದ ಸಾರ ಹಾಗೂ ಸಂಗೀತಕ್ಕೆ ಮೂಲವೆಂದು ಇವರ ಅಭಿಮತ ಮತ್ತು ನಿಷ್ಠಾಪೂರ್ವಕ 'ನಾದೋಪಾಸನೆ' ಸಿದ್ಧಾಂತದಲ್ಲಿ ಇವರಿಗೆ ಅಚಲವಾದ ನಂಬಿಕೆ ಇತ್ತೆಂಬ ಅಂಶವು ಇವರ ಕೃತಿಗಳನ್ನು ಅವಲೋಕಿಸಿದಾಗ ಸುಸ್ಪಷ್ಟವಾಗುತ್ತದೆ. ಇವರ ಕೃತಿಗಳಲ್ಲಿ ಭಕ್ತಿ, ವಿರಕ್ತಿ, ಆಚರಿಸಲಾಗುವ ಜಪ–ಹೋಮ ಕ್ರಮಗಳು ಮುಂತಾದ ಭಾವ ಸಮಾಧಿಗೊಯ್ಯುವ ಹಾಗೂ ಗಾಂಭೀರ್ಯತೆಯುಳ್ಳ ಅಂಶಗಳೇ ತುಂಬಿವೆ.

ಮೇಲೆ ವಿಶ್ಲೇಷಿಸಿರುವ ಎಲ್ಲಾ ಕಾರಣದಿಂದಾಗಿ ಶ್ರೀ ಮುತ್ತುಸ್ವಾಮಿ ದೀಕ್ಷಿತರು ನಿಸ್ಸಂಶಯವಾಗಿ ನಿಸರ್ಗಾರಾಧಕರೆಂಬ ಅಂಶ ವಿದಿತವಾಗುತ್ತದೆ, ಅಲ್ಲದೆ ಅವರಿಗೆ ಸಿದ್ಧಿಸಿದ್ದ ಮಂತ್ರ ಸಿದ್ಧಿಗಳ ಪ್ರಭಾವದಿಂದ ಪ್ರಕೃತಿಯಲ್ಲಿನ ಶಕ್ತಿಗಳ ಸೂಕ್ಷ್ಮ ಹಾಗೂ ಸ್ಥೂಲ ರೂಪಗಳ ಸಮಸ್ತ ಗೋಪ್ಯಗಳನ್ನು ಆಮೂಲಾಗ್ರವಾಗಿ ಬಲ್ಲವರಾಗಿದ್ದು ಹಾಗೂ ಅವರು ಓರ್ವ ವಾಗ್ಗೇಯಕಾರರಾಗಿ 'ನಿಸರ್ಗ'ದ ಶಕ್ತಿಗಳೊಂದಿಗೆ ತಾದಾತ್ಮ್ಯತೆಯನ್ನು ಹೊಂದಿ, ಅವುಗಳನ್ನು ವಿಶಿಷ್ಟ ಹಾಗೂ ವಿಭಿನ್ನ ರೀತಿಯನ್ನು ಕೃತಿಗಳ ಮೂಲಕ ಅಭಿವ್ಯಕ್ತಿಗೊಳಿಸಿದರೆಂದು ತಿಳಿಯಬಹುದಾಗಿದೆ.

ದೀಕ್ಷಿತರ ಜೀವನ ಹಾಗೂ ಸಂಗೀತ ಲೋಕದ ಪಯಣ ಒಂದು ಇಣುಕು ನೋಟ:

ಕ್ರಿ.ಶ. 1775, ಮಾರ್ಚ್ 24ರಂದು ತಿರುವಾರೂರಿನಲ್ಲಿ ಜನಿಸಿದ ಇವರು ಶ್ರೀ ರಾಮಸ್ವಾಮಿ ದೀಕ್ಷಿತ್ ಹಾಗೂ ಶ್ರೀಮತಿ ಸುಬ್ಬಮ್ಮರವರ ಜ್ಯೇಷ್ಠ ಪುತ್ರ; ಕಶ್ಯಪ ಗೋತ್ರ ಹಾಗೂ ಆಪಸ್ತಂಭ ಸೂತ್ರದ ವಡಮ ಬ್ರಾಹ್ಮಣರು. ತಂದೆಯಿಂದಲೇ ವೇದಾಧ್ಯಯನ, ಸಂಗೀತ ಹಾಗೂ ಸಂಸ್ಕೃತ ಶಾಸ್ತ್ರ ಸಾಹಿತ್ಯಗಳ ಓಂಕಾರ. ಕಾಲಕ್ರಮೇಣ ಕಾವ್ಯ, ವ್ಯಾಕರಣ, ನಾಟಕಾಲಂಕಾರ, ಸಂಗೀತ, ಜ್ಯೋತಿಷ, ತಂತ್ರ ಹಾಗೂ ಮಂತ್ರ ವಿದ್ಯೆಗಳಲ್ಲಿ ಪಾರಂಗತರಾದ ಇವರಿಗೆ 18ನೇ ವಯಸ್ಸಿಗೆ ವಿವಾಹ, ನಂತರ ಸಂಸಾರ ಸಮೇತರಾಗಿ ಮಣಲಿಗೆ ವಲಸೆ; ಇವರಿಗೆ ಜೀವನಾಸಕ್ತಿ ಇಲ್ಲದಿದ್ದನ್ನು ಮನಗಂಡು ಹಿರಿಯರು ಮತ್ತೊಂದು ಮದುವೆ ಮಾಡಿಸಿದಾಗ್ಯೂ, ಜೀವನದಲ್ಲಿ ವಿರಕ್ತಿ. ತರುವಾಯ ಚಿದಂಬರ ಯೋಗಿಗಳ ಸಂಪರ್ಕ, ಅವರಿಂದ ದೀಕ್ಷೆ ಹಾಗೂ ಮಂತ್ರೋಪದೇಶ, ಐದು ವರ್ಷ ಸಿದ್ಧಿ ಸಾಧನೆ ಹಾಗೂ ಉತ್ತರಾದಿ ಸಂಗೀತ ಕಲಿಕೆ, ನಂತರ ದಕ್ಷಿಣಕ್ಕೆ ಪುನರಾಗಮನ. ಒಮ್ಮೆ ತಿರುತ್ತಣಿಯಲ್ಲಿ ಕುಲದೈವ ಷಣ್ಮುಖನಿಂದ ಕೃಪಾನುಗ್ರಹ ನಂತರ ಆರಂಭವಾದ ಸಂಗೀತ–ಸಾಹಿತ್ಯ ಕೃಷಿ ಜೀವನದುದ್ದಕ್ಕೂ ಪಸರಿಸಿತು.

ಕೃತಿಗಳಲ್ಲಿ ವಿಶೇಷತೆಗಳು:

ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯವಿದ್ದ ಇವರ ಕೃತಿಗಳು ಸಂಸ್ಕೃತದಲ್ಲೇ ಹೆಚ್ಚು. ಆಯಾ ದೈವದ ಮೇಲೆ ಪ್ರಧಾನ ಶಕ್ತಿ, 9 ಚಕ್ರಗಳು, ಅಧಿದೇವತೆಗಳನ್ನು ಸ್ತುತಿಸುವ ಮಂಗಳ ಕೃತಿಗಳು, ಶಕ್ತಿ ಮಂತ್ರದ ಬೀಜಾಕ್ಷರಗಳನ್ನು ಬಳಸಿ ನವ ವಿಧ ಶಕ್ತಿಯ ಪೂಜಾ ವಿಧಿಗಳನ್ನು ಮಂತ್ರ–ತಂತ್ರಾನುಸಾರ ವಿವರಿಸಿದ್ದಾರೆ. ಇವುಗಳ ಕಲಿಕೆ ಸಾಧಕನಿಗೆ ದಿವ್ಯಾನುಭೂತಿಯನ್ನುಂಟು ಮಾಡುತ್ತದೆ. ಕೃತಿಗಳಲ್ಲಿ ಅರ್ಥಗರ್ಭಿತವಾಗಿ ಆಯಾ ರಾಗಗಳ ಹೆಸರುಗಳನ್ನು ಸಮ್ಮೀಳಿತಗೊಳಿಸಿರುವುದು ಇವರ ಅದ್ಭುತ ಪಾಂಡಿತ್ಯವನ್ನು ತೋರುತ್ತದೆ. ಉದಾ: 'ಸರಸ್ವತೀ ಛಾಯಾತರಂಗಿಣಿ' ಎಂಬ ಕೃತಿಯಲ್ಲಿ 'ಛಾಯಾ ತರಂಗಿಣಿ' ರಾಗದ ಹೆಸರು, ವೇಗವಾಹಿನೀಂ ಆಶ್ರಯೇ ಎಂಬ ಕೃತಿಯಲ್ಲಿ ವೇಗವಾಹಿನಿ ರಾಗದ ಹೆಸರು, 'ಪಂಚಭೂತ ಕಿರಾಣಾವಳಿಂ' ಕೃತಿಯಲ್ಲಿ ಕಿರಾಣಾವಳಿ ರಾಗದ ಹೆಸರನ್ನು ಗಮನಿಸಬಹುದು. ಅಲ್ಲದೆ ಇವರ ಕೃತಿಗಳಲ್ಲಿ ಗೋಪುಚ್ಛಯತಿ ಮತ್ತು ಶ್ರೋತ್ರೋವಹಯತಿಗಳ ಪ್ರಯೋಗಗಳು ಹಾಗೂ ಅನೇಕ ಅಪರೂಪ ರಾಗಗಳಲ್ಲಿ ರಚನೆಗಳನ್ನು ಕಾಣಬಹುದು.

ಇಂತಹ 'ನಾದ ಬ್ರಹ್ಮ', 'ನಾದ ಜ್ಯೋತಿ' ಹಾಗೂ ನಾದೋಪಾಸನೆಯಿಂದಲೇ ನಿಸರ್ಗಾರಾಧನೆಗೈದ ಮಹಾನ್ ಸಂಗೀತ ಶಿರೋಮಣಿ ತಮ್ಮ 60ನೇ ವಯಸ್ಸಿನಲ್ಲಿ ಕ್ರಿ.ಶ. 1835 21ನೇ ಅಕ್ಟೋಬರ್, ಎಟ್ಟಿಯಾಪುರದಲ್ಲಿ 'ಮೀನಲೋಚನಿ ಪಾಶಮೋಚನಿ' ಎಂಬ ಕೃತಿಯನ್ನು ಹಾಡುತ್ತಿದ್ದಂತೆಯೇ ಇಹಲೋಕ ತ್ಯಜಿಸಿ, ತಾವು ಸಾಧನೆಗೈದ ಸಂಗೀತದಿಂದಲೇ ಮುಕ್ತಿ ಪಥದೆಡೆಗೆ ಸಾಗಿದರು.

(ಡಾ॥ ಎಸ್.ಸಿ. ಶರ್ಮ)
ಸಂಗೀತಜ್ಞರು

ಗ್ರಂಥ ಪರಾಮರ್ಶನ:

1) ಗೂಗಲ್ ವಿಕಿಪಿಡಿಯಾ
2) ಸಂಗೀತ ಲಕ್ಷಣ ಸಂಗ್ರಹ–2, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ

ಋಣ

ಗುರು ಸಾರ್ವಭೌಮ ಶ್ರಿ ರಾಘವೇಂದ್ರ ಸ್ವಾಮಿಗಳ ಸಂಗೀತಾಸಕ್ತಿ ಹಾಗೂ ಅವರ ಬದುಕಿನಲ್ಲಿ ಅದರ ಪ್ರಭಾವ

ತುಂಬಿ ಹರಿವ ತುಂಗೆಯ ಪ್ರಚಂಡ ಪ್ರವಾಹದಂತಿತ್ತು ಅದರ ಸೆಳೆತ, ಆದರೆ ಗಮ್ಯ ಇಂದ್ರಿಯಗಳ ಕಲ್ಪನೆಗೆ ನಿಲುಕದಿದ್ದರೂ ಆ ಸೆಳೆತದ ಕೇಂದ್ರ ಅನನ್ಯವಾದ ಪ್ರಣವ ನಾದದ ಒಂದು ಕೇಂದ್ರ ಬಿಂದುವಾಗಿದ್ದು, ಅದು ಅನೂಹ್ಯವಾಗಿತ್ತು, ಆ ನಾದದ ಅಲೆಯಲ್ಲಿ ತೇಲುತ್ತಾ ಹೋದಂತೆ ನನಗೆ ಕಂಡದ್ದು ವೀಣಾಧಾರಿಯಾದ, ಶಿರೋಭಾಗದಿಂದ ಇಳಿ ಬಿಟ್ಟಿದ್ದ ಮೇಲು ಹೊದಿಕೆ, ಕಾಷಾಯ ವಸ್ತ್ರಧಾರಿ, ನಿರ್ಮಲ ಮಂದಹಾಸದ ಮುಖದಲ್ಲಿ ತಿದ್ದಿ ಹಚ್ಚಿದ ದ್ವಾದಶ ನಾಮ, ಮುದ್ರೆ, ತುಳಸೀಮಣಿಹಾರ ಧರಿಸಿದ್ದ ಹಾಗೂ ಸಕಲ ವೇದ ಜ್ಞಾನದ ಮೂರ್ತಿವೆತ್ತಂದಿದ್ದ ಓರ್ವ ತೇಜಸ್ವೀ ವಯೋವೃದ್ಧರೊಬ್ಬರು ತಮ್ಮ ಅಪ್ರತಿಮ ಪ್ರಭೆಯಲ್ಲಿಯೇ ಸುತ್ತಲೂ ಪ್ರಖರವಲ್ಲದ ದೇದೀಪ್ಯಮಾನ ಪ್ರಕಾಶವನ್ನು ಬೀರಿ ತಾದಾತ್ಮ್ಯ ತನ್ಮಯರಾಗಿ ಮೀಟುತ್ತಿದ್ದ ವೀಣೆಯಿಂದ ಹೊಮ್ಮುತ್ತಿದ್ದ ಒಂದೊಂದು ನಾದ ತರಂಗಗಳು ಸಕಲೇಂದ್ರಿಯಗಳನ್ನು ಆವರಿಸಿ ತಣಿಸಿ, ಶಾಂತಗೊಳಿಸಿ, ನನ್ನನ್ನು ಭಾವ ಸಮಾಧಿಯಲ್ಲಿ ಲೀನವಾಗಲು ಸೆಳೆಯುತ್ತಿತ್ತು; ದೃಗೋಚರವಾಗುತ್ತಿದ್ದ ಆ ಅಗೋಚರ ದಿವ್ಯ ಶಕ್ತಿಯು ಯಾವುದೆಂದು ಜ್ಞಾನೇಂದ್ರಿಯಗಳಿಗೆ ತಿಳಿದರೂ ಸಹ ಅದರ ಮುಂದೆ ಮಾತೇ ಹೊರಡದ ನಾನು ಮೂಕಸ್ಮಿತನಾಗಿ ಕುಳಿತಿದ್ದೆ.

ಆಯಾ ಕಾಲಘಟ್ಟಗಳಲ್ಲಿ ರಚಿತವಾದ ಗ್ರಂಥಗಳು, ಶಿಲಾಶಾಸನಗಳಲ್ಲಿ ಆಯಾ ದೇಶ–ಕಾಲ–ಸಂಸ್ಕೃತಿ–ಜೀವನ ಶೈಲಿ–ವ್ಯಕ್ತಿ ಹಿನ್ನೆಲೆ ಇತಿಹಾಸಗಳು ದಾಖಲಾಗಿದ್ದು ಅವುಗಳಿಂದ ಪೂರ್ವೇತಿಹಾಸಗಳನ್ನು ತಿಳಿಯಬಹುದಾಗಿದೆ. ಶ್ರೀ ರಾಘವೇಂದ್ರ ತೀರ್ಥರ ಪ್ರಿಯ ಶಿಷ್ಯರಾದ **ಶ್ರೀಅಪ್ಪಣಾಚಾರ್ಯ**ರಿಂದ ವಿರಚಿತವಾದ **'ರಾಘವೇಂದ್ರ ಮಂಗಲಾಷ್ಟಕ'**ದಲ್ಲಿ ಈ ರೀತಿ ವಿವರಣೆ ಇದೆ:

ಸಾಲಂಕಾರಕಕಾವ್ಯನಾಟಕಕಲಾಕಾಣಾದಪಾತಂಜಲ

ತ್ರಯ್ಯರ್ಥಸ್ಮೃತಿಜೈಮಿನೀಯಕವಿತಾಸಂಗೀತಪಾರಂಗತಃ ।

(<u>**ತಾತ್ಪರ್ಯ:**</u> ಶ್ರೀವೇಂಕಟಭಟ್ಟರು/ಶ್ರೀರಾಘವೇಂದ್ರ ತೀರ್ಥರು **ಸಂಗೀತ,** ಸಾಹಿತ್ಯ, ತರ್ಕ, ವ್ಯಾಕರಣ, ವೇದ, ವೇದಾಂಗಗಳು, ಮೀಮಾಂಸಾ, ಧರ್ಮಶಾಸ್ತ್ರ, ಕಾವ್ಯ, ನಾಟಕ, ಕಲಾ ಇವುಗಳಲ್ಲಿ ವಿಶಾರದರಾಗಿದ್ದರು)

ಮೇಲಿನ ಶ್ಲೋಕದ ಉಲ್ಲೇಖದಿಂದ ಶ್ರೀ ರಾಘವೇಂದ್ರ ತೀರ್ಥರು ಸ್ವತಃ ವೈಣಿಕ ವಿದ್ಯೆಯಲ್ಲಿ ಪಾರಂಗತರಾಗಿದ್ದರು ಎಂಬ ಅಂಶ ವೇದ್ಯವಾಗುತ್ತದೆ. ಅಲ್ಲದೆ ವೈಣಿಕ ವಿದ್ಯೆಯು ಶ್ರೀ ರಾಘವೇಂದ್ರ ತೀರ್ಥರಿಗೆ ಪೂರ್ವಜರಿಂದ ಒಲಿದು ಬಂದಿದ್ದ ಗಂಧರ್ವ ವಿದ್ಯೆ, ಆದ್ದರಿಂದ ಅವರನ್ನು **' ವೀಣೆ ಮನೆತನ '** ಎಂದೂ ಸಹ ಕರೆಯಲಾಗಿತ್ತು. ಶ್ರೀ ರಾಘವೇಂದ್ರ ತೀರ್ಥರ (ಶ್ರೀ ವೇಂಕಟಭಟ್ಟ ಇವರ ಪೂರ್ವಾಶ್ರಮದ ಹೆಸರು) ಮುತ್ತಾತ **ಕೃಷ್ಣಾಚಾರ್ಯರು** ವೀಣಾ ಪಾಂಡಿತ್ಯಕ್ಕೆ ಹೆಸರುವಾಸಿಯಾಗಿ ವಿಜಯನಗರದ ಅರಸ **ಶ್ರೀಕೃಷ್ಣದೇವರಾಯ**ನಿಗೆ ವೈಣಿಕ ಗುರುಗಳಾಗಿದ್ದವರು, ಇವರ ಪುತ್ರ **ಕನಕಾಚಲಾಚಾರ್ಯ** ಹಾಗೂ ಇವರ ಮಗ **ತಿಮ್ಮಣ್ಣಾಚಾರ್ಯರು** ಕ್ರಮವಾಗಿ ಶ್ರೀ ರಾಘವೇಂದ್ರ ತೀರ್ಥರಿಗೆ ಕ್ರಮವಾಗಿ ತಾತ ಹಾಗೂ ತಂದೆ.

ಬಾಲ್ಯದಲ್ಲಿ ಶ್ರೀ ತಿಮ್ಮಣ್ಣಭಟ್ಟರು ಮನೆಯಲ್ಲಿದ್ದ ಪೂರ್ವಜರ ವೀಣೆಯನ್ನು ಅಕ್ಕರೆಯಿಂದ ಅದನ್ನು ನೋಡುತ್ತಾ, ಅದರ ತಂತಿಯ ಮೇಲೆ ಕೈಯಾಡಿಸಿಕೊಂಡು ತನ್ನದಾಗಿಸಿಕೊಂಡಿದ್ದು ಅವರಲ್ಲಿ ಆ ಎಳೆಯ ವಯಸ್ಸಿನಲ್ಲೇ ಮೊಳೆತ ಸಂಗೀತಾಸಕ್ತಿಯನ್ನು ತೋರಿಸುತ್ತದೆ. ಎಂಟರ ವಯಸ್ಸಿನಲ್ಲೇ ತಂದೆ ವೀಣಾ ಶ್ರೀ ತಿಮ್ಮಣ್ಣಭಟ್ಟರನ್ನು ಕಳೆದುಕೊಂಡ ಶ್ರೀವೇಂಕಟಭಟ್ಟರು ಮಧುರೆಯಲ್ಲಿ ಅಕ್ಕ-ಭಾವ (ಶ್ರೀಗುರುರಾಜಾಚಾರ್ಯರು)ರ ಮನೆಯಲ್ಲಿ ಆಶ್ರಯ ಪಡೆಯುತ್ತಾರೆ. ಅಲ್ಲಿ ಗುರುಕುಲವೊಂದರ ಅಧ್ಯಕ್ಷರಾದ ಶ್ರೀಲಕ್ಷ್ಮೀನೃಸಿಂಹಾಚಾರ್ಯರ ಮನೆಯಲ್ಲಿ ಎಂಟು ವರ್ಷಗಳ ಕಾಲ ವೇದ, ವೇದಾಂಗ, ತರ್ಕ, ಮೀಮಾಂಸ, ವ್ಯಾಕರಣ, ಸಂಗೀತ, ಸಾಹಿತ್ಯಗಳಲ್ಲಿ ಪರಿಣತಿಯನ್ನು ಪಡೆದರು.

<u>ತಂಜಾವೂರಿನಲ್ಲಿ ನಡೆದ ಒಂದು ಘಟನೆ:</u> ತರುಣ ಶ್ರೀವೇಂಕಟಭಟ್ಟರು ತಮ್ಮ ಗುರುಗಳಾದ ಶ್ರೀ ಸುಧೀಂದ್ರ ತೀರ್ಥರ ಬಳಿ ಇದ್ದಾಗ ಅಲ್ಲಿನ ರಾಜ ರಘುನಾಥನಾಯಕರ ರಾಜಗುರು ಹಾಗೂ ಮಂತ್ರಿಗಳಾಗಿದ್ದ ಯಜ್ಞನಾರಾಯಣ ದೀಕ್ಷಿತರು ಗುರುಗಳನ್ನು ಭೇಟಿಯಾಗಲು ಬಂದಾಗ ವೇಂಕಟಭಟ್ಟರು ವೀಣಾ ವಾದನದಲ್ಲಿ ನಿರತರಾಗಿದ್ದನ್ನು ಕಂಡು ಅಚ್ಚರಿಗೊಂಡರು. ಯಜ್ಞನಾರಾಯಣ ದೀಕ್ಷಿತರು ಸ್ವತಃ ಸಂಗೀತ ಅದರಲ್ಲೂ ವೀಣಾವಾದನದಲ್ಲಿ ಉದ್ದಾಮ ಪಂಡಿತರು. ನಂತರ ಗುರುಗಳು ತಮ್ಮ ಶಿಷ್ಯ ವೇಂಕಟಭಟ್ಟರನ್ನು ಕುರಿತು ವೇದಾಂತ ಶಾಸ್ತ್ರವಲ್ಲದೆ ಸಂಗೀತ ಸಾಹಿತ್ಯದಲ್ಲೂ ಪರಿಣತಿ ಇರುವುದನ್ನು ದೀಕ್ಷಿತರಿಗೆ ತಿಳಿಸಿ ಪರಿಚಯ ಮಾಡಿಸುತ್ತಾರೆ.

ತರುಣ ವೇಂಕಟಭಟ್ಟರ ವ್ಯಕ್ತಿತ್ವ ಭಾವ-ಬುದ್ಧಿಗಳ ಅಪೂರ್ವ ಸಂಗಮ, ಒಂದೆಡೆ ಶಾಸ್ತ್ರ ಬೋಧೆ, ತರ್ಕಗಳಲ್ಲಿ ಪ್ರಕಾಂಡ ಪಾಂಡಿತ್ಯ, ಮತ್ತೊಂದೆಡೆ ಸಾಹಿತ್ಯ ಸಂಗೀತಗಳಲ್ಲಿ ಅದಮ್ಯ ಆಸಕ್ತಿ. ಅವರು ತಮ್ಮ **<u>ಆತ್ಮ ಸಂತೋಷಕ್ಕಾಗಿ</u>** ಅವರು ತಮ್ಮ ನೆಚ್ಚಿನ ವೀಣಾ ವಾದನದ ಸಂಗೀತದಲ್ಲಿ ತಲ್ಲೀನರಾಗುತ್ತಿದ್ದರು.

ಗೃಹಸ್ಥಾಶ್ರಮದಲ್ಲಿದ್ದಾಗ ವೇಂಕಟಭಟ್ಟರು ವಿಧಿಯ ಲೀಲೆಯಂತೆ ಬಡತನದ ಬೇಗುದಿಯಲ್ಲಿದ್ದಾಗ ಅವರಿಗೆ ಸಾಂತ್ವನ ನೀಡುತ್ತಿದ್ದುದು **<u>ವೀಣಾ ವಾದನ ಸಂಗೀತ</u>**. ವೇಂಕಟಭಟ್ಟರು ವೀಣೆ ಹಿಡಿದು ಕುಳಿತರೆ ಹಸಿವು-ನೀರಡಿಕೆಗಳನ್ನು ಮರೆಯುತ್ತಿದ್ದರು ಹಾಗೂ ಈ ಸಂದರ್ಭದಲ್ಲಿ ಪತ್ನಿ ಸರಸ್ವತಿ ಬಾಯಿ ತಾನೂ ಸಹ ಅಷ್ಟೇ ತನ್ಮಯತೆಯಿಂದ ದೇವರ ನಾಮ, ಸ್ತೋತ್ರಗಳನ್ನು ಭಾವಪೂರ್ಣವಾಗಿ ಹಾಡುತ್ತಾ ಲೋಕ ಮರೆಯುತ್ತಿದ್ದರು.

ಇನ್ನೊಂದು ಮುಖ್ಯ ಅಂಶವೆಂದರೆ ಶ್ರೀ ವೇಂಕಟಭಟ್ಟರಿಗೆ ಪೂರ್ವಜರಿಂದ ಬಳುವಳಿಯಾಗಿ ಬಂದ ಕರ್ನಾಟಕ ಸಂಗೀತದ ಹಿನ್ನೆಲೆಯಿದ್ದ ಕಾರಣ, ಅವರ ಬದುಕಿನ ಸ್ಥಿತ್ಯಂತರ ಕಾಲಗಳಲ್ಲಿ ಅವರ ವ್ಯಕ್ತಿತ್ವದ ವಿಕಾಸ ಹಾಗೂ ಅವರ ಅಧ್ಯಾತ್ಮದ ಉನ್ನತಿಗೆ ನಾಂದಿ ಹಾಡಿ ಅಲೌಕಿಕದೆಡೆಗೆ ಕೊಂಡೊಯ್ದು ಮುಂದೆ ಅವರು **ಶ್ರೀ ರಾಘವೇಂದ್ರ ತೀರ್ಥರಾಗಿ** ಪರಿವರ್ತನೆಗೊಳ್ಳುವಲ್ಲಿ **'ಸಂಗೀತ'ವು** ಪ್ರಮುಖ ಪಾತ್ರ ವಹಿಸಿದೆ ಎಂದು ತರ್ಕಿಸಬಹುದಾಗಿದೆ.

ಶ್ರೀ ವೇಂಕಟಭಟ್ಟರು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀ ರಾಘವೇಂದ್ರ ತೀರ್ಥರಾದ** ಬಳಿಕವೂ ಸಹ ಸಂಗೀತ ಹಾಗೂ ವೀಣಾ ವಾದನ ಅವರ ಒಡನಾಡಿಯಾಗಿತ್ತು. ಅವರ ದಿನಚರಿಯ ಕೊನೆಯಲ್ಲಿ ಶ್ರೀರಾಘವೇಂದ್ರ ತೀರ್ಥರು ವಿದ್ವತ್ಸಭೆಯಲ್ಲಿ ಪಾಲ್ಗೊಂಡು ಶಾಸ್ತ್ರ, ಸಾಹಿತ್ಯ, ಕಲಾರಾಧನೆ, ಉಪನ್ಯಾಸ ಇವುಗಳಲ್ಲಿ ಭಾಗವಹಿಸುವುದು ಹಾಗೂ ವೀಣಾ-ವೇಣು-ಮೃದಂಗ ವಿದ್ವಾಂಸರ ಕಲಾಗೋಷ್ಠಿ ಏರ್ಪಡಿಸಿ, ಕಲಾವಿದರನ್ನು ಪ್ರೋತ್ಸಾಹ ನೀಡಿ ಆಶೀರ್ವದಿಸುತ್ತಿದ್ದರು. ರಾಯರ ಈ ದಿನಚರಿಯನ್ನು ರಾಜಾ ಎಸ್. ಗುರುರಾಜಾಚಾರ್ಯ ಇವರು ತಮ್ಮ **'ಶ್ರೀರಾಘವೇಂದ್ರ ಸಾರ್ವಭೌಮರು'** ಎಂಬ ಗ್ರಂಥದಲ್ಲಿ ವಿವರವಾಗಿ ದಾಖಲಿಸಿದ್ದಾರೆ.

ಅಲ್ಲದೆ ಶ್ರೀ ರಾಘವೇಂದ್ರ ವಿಜಯ ಗ್ರಂಥದ 9ನೇ ಸರ್ಗದ 20ರಿಂದ 62ನೇ ಶ್ಲೋಕದವರೆಗೂ ಇದರ ವಿವರಗಳಿವೆ. ರಾಯರ ವೀಣಾ ವಾದನದ ರಮಣೀಯತೆ ಹಾಗೂ ಭಕ್ತಿ ಭಾವಕ್ಕೆ ಮನಸೋತ ಶ್ರೀಕೃಷ್ಣನು ಅವರ ಮುಂದೆ ನರ್ತಿಸಿದ ಪರಿ ನಿಜಕ್ಕೂ ಪವಾಡ ಸದೃಶ ವಿಸ್ಮಯ.

ಇದು ಕಾರಣ ಶ್ರೀ ರಾಘವೇಂದ್ರ ತೀರ್ಥರು ಕರ್ನಾಟಕ ಸಂಗೀತದ ಎಲ್ಲಾ ಪ್ರಕಾರಗಳನ್ನು ಬಲ್ಲವರಾಗಿದ್ದ ವೈಣಿಕ ಮನೆತನದವರು ಹಾಗೂ ಅವರ ಪೂರ್ವಜರು ರಾಜಾಶ್ರಯ ದೊರೆತು **ಕರ್ನಾಟಕ ಸಂಗೀತವು** ಆಯಾ ಪ್ರಾಂತ್ಯಗಳಲ್ಲಿ ವಿಸ್ತರಿಸಲು ಹಾಗೂ ಅಭಿವೃದ್ಧಿ ಹೊಂದಲು ಶ್ರಮಿಸಿದವರೆಂದು ತಿಳಿಯಬಹುದಾಗಿದೆ. ಈ ನಿಟ್ಟಿನಲ್ಲಿ ಶ್ರೀ ರಾಘವೇಂದ್ರ ತೀರ್ಥರ ಹಾಗೂ ಅವರ ವಂಶಜರ ಕರ್ನಾಟಕ ಸಂಗೀತಕ್ಕೆ ಸಂಬಂಧಿಸಿದಂತೆ ಕೊಡುಗೆಗಳನ್ನು ಬೆಳಕಿಗೆ ತರಲು ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿರುವ ಅಂಶ ಹಾಗೂ ಅದಕ್ಕೆ ಒತ್ತು ನೀಡಬೇಕಾಗಿರುವುದನ್ನು ಮನಗಾಣಬೇಕು.

ಶ್ರೀ ರಾಘವೇಂದ್ರ ತೀರ್ಥರು ಕನ್ನಡದಲ್ಲಿ ಎರಡು ಕೃತಿಗಳನ್ನು ರಚಿಸಿರುವರೆಂದು ತಿಳಿದು ಬರುತ್ತದೆ ಒಂದು ಭೈರವಿ ರಾಗ, ತ್ರಿಪುಟ ತಾಳದಲ್ಲಿರುವ **'ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದವ'** ಎಂಬ ಕೀರ್ತನೆ ಮತ್ತೊಂದು ವಾಯುದೇವರ ಅವತಾರ ತ್ರಯಗಳನ್ನು ವರ್ಣಿಸುವ **'ಮರುತ ನಿನ್ನ ಮಹಿಮೆ'** ಎಂಬ ಸುಳಾದಿ. ಮುಂದೆ ಈ ಕೀರ್ತನೆಯ ಪ್ರಭಾವದಿಂದ ಶ್ರೀ ವಿಜಯದಾಸರು, ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು ಇವರುಗಳಿಗೆ ಹಾಗೂ ನಂತರದ ದಾಸ ಪೀಳಿಗೆಗೆ ಹರಿದಾಸ ಸಾಹಿತ್ಯ ಪರಂಪರೆಯು ಪ್ರವಹಿಸಲು ಸ್ಫೂರ್ತಿ ನೀಡಿದೆ ಎಂದರೆ ತಪ್ಪಾಗಲಾರದು.

ದಾಸ ಸಾಹಿತ್ಯ ಪರಂಪರೆಯಲ್ಲಿ ಬಂದಂತಹ ತಿರುಮಲ ದಾಸರ ಶಿಷ್ಯರಾದ **ಶ್ರೀ ಪ್ರೇಮದಾಸರು,** (19ನೇ ಶತಮಾನದ ಆದಿ ಭಾಗದಲ್ಲಿದ್ದ ಇವರ ಅಂಕಿತ ನಾಮ **'ಅಭಿನವ ಜರ್ನಾದನ ವಿಠಲ'**) ತಮ್ಮ ಒಂದು ಕೃತಿಯಲ್ಲಿಯೂ ಸಹ ಶ್ರೀ ಗುರು ರಾಘವೇಂದ್ರರನ್ನು **'ಸಂಗೀತ ಪ್ರಿಯ'** ಎಂದು ಸಂಬೋಧಿಸಿದ್ದಾರೆ. ಇದು ರಾಯರ ಸಂಗೀತ ಪ್ರಿಯತೆಯನ್ನು ಪುಷ್ಟೀಕರಿಸುತ್ತದೆ.

"ತುಂಗಾತೀರದಿ ನಿಂತ ಸುಯತಿವರ್ಯನ್ಯಾರೆ ಪೇಳಮ್ಮಾ
ಸಂಗೀತ ಪ್ರಿಯ ಮಂಗಳ ಸುಗುಣತರಂಗ ಮುನಿಕುಲೋತ್ತುಂಗ ಕಾಣಮ್ಮ"

ಆನಂತರ ಆ ಅಪೂರ್ವ ತೇಜಸ್ಸಿನ ವೃದ್ಧರನ್ನು ತದೇಕ ಚಿತ್ತದಿಂದ ನೋಡುತ್ತಾ ಕುಳಿತಿರಲು, ಆ ಯತಿರ್ವಯರು ಮುಗುಳ್ನಗುತ್ತಾ ಅನುಗ್ರಹ ದೃಷ್ಟಿಯಿಂದ ನನ್ನತ್ತ ಬಾಗಿ ತಲೆ ಸವರಿದಂತಾಗಲು ಎಚ್ಚೆತ್ತ ನಾನು ಸುತ್ತಲೂ ನೋಡಲು ಅರುಣೋದಯಕ್ಕೆ ಇನ್ನೂ ಎರಡು ತಾಸು ಇರುವುದು ತಿಳಿದು, ಇಲ್ಲಿಯವರೆಗೂ ನಾ ಕಂಡ ಕಲ್ಪನೆಯು ವಾಸ್ತವವಾಗಲ್ಲಿಲ್ಲವಲ್ಲಾ ಎಂದು ಹಲುಬುತ್ತಾ, ನಂತರ ಪ್ರಾಂಜಲ ಮನಸ್ಕನಾಗಿ ಮತ್ತೊಮ್ಮೆ ಆ ಯತೀಂದ್ರರನ್ನು ಸ್ಮರಿಸುತ್ತಾ ಸಂಗೀತ ತಾಲೀಮಿಗೆ ಅಣಿಯಾಗಲು ಹೊರಟೆ.

(ಡಾ॥ ಎಸ್.ಸಿ. ಶರ್ಮ)
ಶಿಕ್ಷಣ ತಜ್ಞರು ಹಾಗೂ ಸಂಗೀತಜ್ಞರು

ಪರಾಮರ್ಶನ ಗ್ರಂಥ:
1. ಶ್ರೀ ರಾಘವೇಂದ್ರ ದರ್ಶನ, ಲೇಖಕರು ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ
2. ಶ್ರೀ ರಾಘವೇಂದ್ರ ಸ್ವಾಮಿಗಳು, (ಜೀವನ ಚರಿತ್ರೆ), ಲೇಖಕರು ಕೊರಟಿ ಶ್ರೀನಿವಾಸರಾವ್

ಶುಭಂ

The Spring of Carnatic Music–
Dr. M.L. Vasanthakumari

For a while I lost all my senses in bewilderness, when I met that lady with ever-smiling face, traditionally drapped in Kancheepuram saree and above all simplicity personified, at Malleshwaram Sangeeta Sabha, when late Sri E.N. Seetaram, Secretary, invited me for a vocal concert of **Dr. M.L. Vasanthakumari,** which I attended amidst my studies. It was only after when I came in contact of that doyen I realized that all adorable aspects of mellifluousness, refinement and pleasantness were present in her signing and while performing **Dr. M.L. Vasanthakumari**, herself was music personified. It is not an exaggeration that acronymn ***M.L.V.*** would aptly suit her for **'Melody, Laya & Versatility'**.

The Carnatic Music, during the first half of 20th century witnessed the emergence of female trinity vocalists symbolizing the three essence of Music–***M.S. Subbalakshmi*** representing divine **Bhakti** (Devotion), ***D.K. Pattammal*** representing traditional gaiety in rendering ***Pallavi*** and ***M.L. Vasantha Kumari*** represented illuminating lustre of **Intellect in Music** and all the three were considered as demi-goddesses of Carnatic music.

The compositions of **Purandara Dasa**, the 16th century saint poet and whom we regard as **'Pitamaha'** of Carnatic music were immortalized by **M.L.V.** who rediscovered the beauty of some rare genre of compositions viz., *Suladi, Ugabhoga*, etc., in her unique style. It is not an overstatement to mention that **M.L.V.** was the first major singer who gave status of pride to Dasara padas. **MLV** inherited the abundant knowledge of Musicology as a gift from her mother Smt. Lalitangi, who refounded the rich repertoire of compositions of Purandara Dasa and other dasas with musical notations and published the same. Added to this, those compositions are combination of simple language and rich imagery with qualities of legend, mythology and philosophy and because of these her vocal music touched millions of hearts.

It is apt to say that for the foundation laid by Sri Purandara Dasa, Saint Thyagaraja constructed a great edifice wherein **M.L.V.** put it in picturesquely.

Born on 3rd July 1928 in Madras, both her parents were musicians, father Sri Oothanur Ayyasami Iyer was well versed in Carnatic music and also had inclination towards Hindustani classical music as well and mother Smt. Lalithangi, hailing from a family which is traditionally devoted to fine arts. Later, her music career was nurtured by Coimbatore Thayi, Flute Subba Rao, Veena Dhanammal.

Gradually the young **MLV** was allowed to accompany her mother to recitals. Her enrolment as a discipline of Sri G.N. Balasubramaniam made a remarkable progress in her career which prompted for the birth of new star on the horizon of Carnatic music. Rigorously trained by her mother and Guru, Sri G.N. Balasubramaniam, **MLV** very soon became an all-time great artist.

MLV never hestitated to acknowledge the musical contribution towards her accompanists and encouraged them was indeed remarkable. She also extended her moral and monetary support without second thought, even at the times of ordeal, whoever approached her.

M.L.V. who was known for her dynamism, broad thinking, innovativeness and enlightened artiste, was perturbed by the social revolution that took place during 1960s. For this she advocated that forces which incite the public with narrow thinking would destroy the unity harnessed and created by music and they have no values and stakes in preserving our artistic and cultural heritage and they should not be allowed to harm and ruin it.

M.L.V. has also served in many capacities in teaching Carnatic Music at Rishi Valley School, Madanapalli, Mahila University, Tirupati, etc., and she favoured for revival of **Guru-Kula system** of teaching within the institutional frame work.

During 1976, Mysore University recognizing and venerating her contributions to Carnatic Music especially for her work with regard to Purandaradasa had conferred Honorary Doctorate. Though ***M.L.V.*** was never invited by Government of India to represent the country abroad at any point of time, her music breaking all barriers of boundaries, language and gender, took her to travel all corners of the world.

M.L.V. also received the third highest civilian honour from the Indian Government, **"Padma Bhushan"**. At the age of 49, she became the youngest woman to earn the award and title in Carnatic music, **Sangita Kalanidhi** during 1977. She also received **Sangeet Natak Akademi Award** (1970) and **Sangeetha Kalasikhamani** award from The Indian Fine Arts Society, Chennai (1987).

Apart from performing classical music concerts, ***M.L.V.*** was also a playback singer. Her tryst began in the filmdom during 1946 and 'Manamagal' (1951) was her big hit. ***M.L.V.*** also sang two Kannada films viz., Bedara Kannappa and Bhookailasa.

However, owing to her age related ailments, one of the greatest and ***M***arvellous ***L***ovely ***V***ocalist of Carnatic Music of our times breathed her last on 31-10-1990 and with that the **'Spring Time'** (**Vasanta Kaala**) of Carnatic Music came to an end. But, many times I have cherished the sacred memories with ***M.L.V.*** to gain inspiration before I commence my riyaz in the early hours and though it is difficult to reconcile that ***M.L.V.*** is not amidst us, her immortal music is reverberating in hearts, mind and soul with elegance of music by her scintillating voice forever.

(Dr. S.C. Sharma)
Academician & Musicologist

That Voice which Mesmerized the World !

Outside the sun was scorching relentlessly with weird heat while I was sitting in my posh office at 3rd floor and watching through the huge windows the vehicles moving on fly-over. Many times the haunting loneliness seldom gives much solace which mind craves for and takes back to nostalgia, to those days of my childhood, the school, teachers, classmates, places where I wandered, the ancestral home which was cradle for all my journeys, the verandah where I spent my leisure time with sparrows, squirrels, pigeons, parrots and puppies, who were my playmates, while Amma was busy in drawing intrinsic pictures by connecting those dots with curves and lines or cleaning the rice picking stone particles and husk, the portals of entrance to home and my favourite radio, the only relic that connects me to the past, which transmitted celestial voice, the Akasha Vani; the AIR aired that ***peculiar voice*** which rendered Suprabhatam, Vishnu Sahasranama, Bhaja Govindam and obsessed me in the early hours of the dawn, and later it took many years for me to meet that physical entity which possessed that Mesmerizing Voice !

It was an evening, during 1980s, which was remarkable one, I had an opportunity to visit at Sri Venkatachalam's house and when I reached there, to my surprise an entity of mellifluous voice which I was eager to meet for all these years, ***M.S. Subbalakshmi,*** was there !

Ustad Bade Ghulam Ali Khan, the stalwart of Patiala Gharana Hindustani Music adorned her as ***'Suswaralakshmi'*** and Sarojini Naidu, national leader and poet affectionately called her as **'Nightingale of India'** the sobriquet which Sarojini had.

This year marks the ***Golden Jubilee*** of M.S. Subbalakshmi since she presented a music concert as India's cultural ambassador when she was invited by the then Secretary General of United Nations, U. Thant, on the occasion of **'United Nations Day'** at Carnegie Hall, New York, UN General Assembly on 23-10-1966. That day she was received by standing ovation from the delegates present at UN assembly and also it was first time any Indian musician sang at U.N.O.

It is on that day the Sanskrit shloka **'Maithreem Bhajatha'** authored by Sri Chandrasekarendra Saraswati, the pontiff of Kanchi Mutt, reached all the corners of the world rendered by the melodious voice of **M.S.S.** thereby propagating the ancient ideals of India and its heritage.

Born to Subramania Iyer and Shanmukavadiver Ammal on 16th September 1916 in Madurai, **Madurai Shanmukhavadivu Subbulakshmi** had a very good musical background from family. This child prodigy was introduced to Carnatic music by receiving training under Semmangudi Srinivasa Iyer and she learnt Hindustani classical music under Pundit Narayan Rao Vyas. Her arangetram was at the age of 11, in the premises of the Tiruchirapalli's Rock Fort Temple, wherein T. Chowdiah and Dakshinamurthy Pillai accompanied her by violin and mridangam respectively. In 1929, when she was just 13, gave her first stage performance at Madras Music Academy and it received her many admirers and recognized by great musicians of her times.

During 1940 she married Sri T. Sadasivam, a staunch Gandhian, who by his writings took up the cause of India's freedom movement and later launched **'Kalki'** Tamil weekly. She has done commendable works during her entire musical journey by performing more than 200 charity concerts to raise funds for philanthropic purpose and many universities have conferred Honorary Doctorates in recognition of her contribution to Indian Classical Carnatic Music. How can a devout Hindu forget Sri Venkateshwara Suprabhata? In 1963 when she made recording of Venkatesa Suprabhata, the entire royalty received from that rendition was contributed to start Tirupati Veda Patasala of Tirupati Tirumala Devasthanam.

M.S. Subbalakshmi, also enacted few Tamil and Hindi movies viz., Sevasadanam (1938), Shakuntalai (1940), Savithri (1941), Meera (1945) and Meera Bai (1947, Hindi). However, later she left the filmdom after when her Music career took upsurge and became one of the prominent Carnatic music vocalists and this led for extensive foreign tour wherein she achieved significant landmarks in her career by performing at Edinburgh International Festival of Music and Drama, Royal Albert Hall, London, Festival of India at Moscow, etc.,.

Through her devotion, gifted tone, blessed pitch, perfect pronunciation and Knowledge of Sangeeta acquired by sheer practice, I rather call it as *'Tapasya'*, she revived many compositions to Carnatic music which were lost in the time and revolutionized the Carnatic Music. Almost her every works, whether it is Sanskrit hymns of Adi Shankaracharya, Kannada Dasa Sahitya Keertanas, Telugu kritis of Tyagaraja, Annamacharya or Abhangs of Marati, Gujarati Meera Bhajas, Guru Granth Sahib and even Urdu Ghazals of Mirza Ghalib were sung by her in an inimitable way and thus she became household name all over India.

M.S. Subbalakshmi never hankered for any awards, honours, but they came flowing beneath her feet in recognition of her contribution of Carnatic classical music whether it is **'Asthana Vidwan'** of Tirupati Tirumala Devastanam or **Ramon Magsaysay** award (1974; she was the first Indian Musician to receive) or even **Bharat Ratna,** the highest civilian honour (1998; she was the first musician to be honoured).

Another important aspect to be mentioned here is that she had astounding flair for languages and with ease she tuned lyrics of other languages and sang them. On one occasion M.S. Subbalakshmi was invited to render invocation on the eve of the inauguration of the 6th Afro-Asian Congress of Ophthalmology held in Madras and there she sang an invocation song comprising of five languages viz., Sanskrit, Arabic, Japanese, English and Tamil and even the Arabic verses from Holy Quran and this shows her experimentation and innovativeness in Carnatic music.

She emerged like a phoenix from the ashes of the social evils, of course the contribution of male-echelons of the time, at the same time she also tumbled the male-bastion which was prevailed in the Carnatic music world by her sheer devotion and dedication to **Goddess Saraswati**. Truly, she pioneered and heralded new era and became a prototype cult to the coming generations, which resulted in emergence of wave of women contributors in the Music world.

However, M.S. Subbalakshmi, after the death of her husband in 1997, stopped all her public performances and became reclusive in search of tranquility, but within few years, at the age of 88, i.e., on 11-12-2004 that ***'Voice'*** became silent and travelled to the abode of Perennial Peace leaving behind the rich legacy of music for us and India lost one of its **'Music Gem'** from her treasure.

On 18-12-2005, the Government of India released a commemorative postal stamp on her honour and memory. It is aptly said by Mahatma Gandhi that he would rather hear Subbulakshmi ***speak*** the songs rather than hear someone else sing it.

Three major technical expert qualities in **M.S.S.** were (i) presentation of Tana, (ii) voice which moves sweetly and fluently and purity in musical pitch and (iii) more emphasis for sanctity for lyric or literature, irrespective of language, while pronouncing and hence her music even today is considered as **'Pure Music'**. It may be noted that her breath control and strict adherence to above subtle technicalities while presenting the music without any compromise was astonishing one. Hence, she is regarded as **Musical Genius** forever.

Alas! This year being her birth centenary, I thought it that there would not be a better way to remember that proud daughter of ***Maa Bharati*** than through my humble words and music.

(Dr. S.C. Sharma)
Academician & Musicologist

A Tribute to 'Swaramurthy' Sri Venkatanarayana Rao

(On the occasion of Sri V.N. Rao's Centenary Celebration from 5th to 7th February 2016 at Mysore)

It was **26th December 1924**, a momentous event for Kannadigas, the 39th Indian National Congress session was scheduled presided by Gandhiji and over 1,800 delegates from all over India assembled at the venue of Belgaum with all expectations and enthusiasm. It was at this historic session a unanimous resolution for **'Non-Violent & Non-Co-operation'** to attain political freedom was passed. Great stalwarts of music like Veene Seshanna gave their recital, Huyilagola Narayana Rao and Dr. Gangubai Hanagal sung the Kannada anthem **'Udayavagali namma cheluva Kannadanadu'** at the session.

Amidst them a 7 year old boy sang few compositions which his affectionate 'Tatha' had taught and the delegates including Gandhiji appreciated his performance. Later, after a gap of 4 years, when Gandhiji visited Mysore, he had not forgotten that boy who enthralled him at Belgaum and upon his request a concert was arranged wherein both vocal and instrumental concert were performed and Gandhiji was swamped by the waves of Carnatic music of that young musician.

Hailing from a family of distinguished Carnatic musicians, where the legacy of music passed generation to generation, **Sri Venkatanarayana Rao** was brought up under the tutelage of his grand-father **Sri Veene Sheshanna,** the inspirational genius who had greatly influenced him. Accompanying with his grand-father to all concerts, brought a phenomenal change, growth, chiseled and transformed him into a complete musician. Gradually he got acquaintance with the palace and also Nalwadi Krishnaraja Wodeyar whenever accompanied his grand-father, who was 'Aasthana Vidwan'.

Once Sri Veene Sheshanna attended **'Vasantotsava'** at palace of Gadwal Maharaja and started playing complicated component *'Taraka Brahma Swarupini'* in Kalyani raga, Adi Tala. In the middle of the Pallavi the 7 year boy 'Puttasami' (called by his grand-father) rendered with ease and confidence expressing its intricate phrases without diminishing its aesthetic value of the raga. Impressed by this, the Maharaja of Gadwal bestowed the boy with title **'Swara Murthy'** for his musical brilliance.

But, the death of his grand-father came as a jolt to Sri V.N. Rao, however, the magnanimous patronage from the palace continued for the pursuit of his musical ambition under great stalwarts of that time viz., Veena Subbanna and Muthaiah Bhagvathar for Veena and vocal music respectively. Later, he took up western music at Trinity College of Music, London, a branch newly opened at Mysore palace at that time and mastered in Harp, Terimen and Piano.

During his heydays, he continued the legacy of his forefathers and remained as 'Asthana Vidwan'. The death of Krishnaraja Wodeyar had caused emotional trauma, and the recognition, patronage and honour continued during Jayachamaraja Wodeyar. Sri V.N. Rao, apart from performing during Navaratri Dasara durbar, he gave many concerts at various Rama Mandirs of Mysore and also invited to perform in various temples, mutts, social events, esteemed organizations in and around Mysore.

In addition to his flamboyance in music, he had urge for taking challenges and experimentation with music and musical instruments and probe into the intricacies and technicalities in them. His intellect, knowledge combined with self-confidence he possessed, brought him adoration, rewards and further patronage from palace.

The tide of Time:

However, with the change in times especially after the post-independence era, when the princely states all over India came under new democratic and federal structure, the royalty and patronage enjoyed by court musicians became a halt and thus it affected the livelihood of many artists, musicians, poets, etc.,. Inevitably, Sri V.N. Rao, had to establish his career afresh under the auspices of new government and though the new set-up provided opportunities and encouragement to art and music, but also needed coming forward by the artists in an assertive manner to familiarize themselves with the concerned authorities, for which people like Sri V.N. Rao, with self-esteem and respect, had to shy away and maintained his dignity. This made him to shift to Malleshwaram, Bangalore.

In a Kannada article titled 'ತಂದೆ ಹಾಗೂ ಗುರು' by Prof. Mysore V. Subramanya, who is none other than his son and renowned musicologist, has beautifully recorded his association with his father, the plight of the family and reasons for shifting to Bangalore.

Contributions, Achievements and Honours:

During 1962, Sri V.N. Rao founded a music school in memory of his beloved grand-father viz., **'Veena Gana Mandira'** and under the aegis of this school, to give impetus to Carnatic music many events were celebrated with religious zest viz., Veene Sheshanna Day, Thyagaraja Aradhane, Purandara Dasa Aradhane, Ramothsava, Navaraatri, etc.,. He also taught music to blind students and thousands of poor and deserving students and conducted special music workshops. He promoted the **'Mysore Baani'** style which lays more emphasis on 'Swaras' and hence many more occurrences of 'Meettu' than the other 'Banis'. Although compositions have been notated and codified to an extent, there is ample scope for improvisation and extempore for a performing artist. This could be through Manodharma–like raga alapana and swara singing and also even ragas are always open to interpretation.

Sri V.N. Rao has also composed few kritis in Kannada in Saptha Taaleswari Varna, a varna in Bhegade Raaga and in Dharmavathi Raga.

During '9th Musicians Conference and Music Festival' held on 31-12-1978, under the aegis of Karnataka Ganakala Parishath, he presided over the conference and on the last day he was conferred with the title **'Ganakala Bhushana'** in a befitting manner.

Apart from his vocal and veena concerts, he was invited to deliver lectures with demonstration on diverse subjects ranging from Western classical to Kannada Jaavalis. To name a few, a demonstration on 'Taanam' during 2nd Musician's Conference, (1971), a guest lecture on 'Application of Western Music in Carnatic Music, (1974), an illustrated talk on 'Pallavi' in study circles and also on Kannada Jaavalis, which demonstrates his extensive knowledge and research. He also served in many organizations in various 'Honorary' capacities. Apart from this, he was a prolific writer and authored two books on his 'Guru' and grand-father Sri Veene Sheshanna, and won national award for one of his books.

He had vast and prominent well-wishers, friends, which included litterateurs viz., B.M. Srikantaiah, Ti.Ta. Sharma, S.K. Sharma, A.N. Krishna Rao, T.N. Subba Rao (Ta.Ra.Su), Masti Venkatesha Iyengar, G.P. Rajaratnam, T.S. Doraiswami, Chintanapalli Ramachandraraya, Pandit Sheshadri Gawai, Veene Doraiswamy Iyengar, M.S. Chintamani, etc.,.

On 7th August 1980, Sri V.N. Rao met with an accident and succumbed to death due to severe head injury. The tragic death of **'Swara Murthy' Sri V.N. Rao** was broadcast in AIR and also in major dailies. No doubt, **Sri V.N. Rao** was not only a musician, but also a multi-talented personality as musicologist, composer, writer and orator, in other words **'Polygonal Personality'**. However, his legacy is even today carried further by his children and their progeny, especially by son Prof. Mysore V. Subramanya, which are highly commendable in preserving the old Mysore Carnatic Music tradition.

On the occasion of birth centenary of **'Swara Murthy late Sri Venkatanarayana Rao'**, which is being observed from **5th** to **7th February 2016**, at Mysore, as a tribute this article is dedicated to him.

(Dr. S.C. Sharma)
Academician & Musicologist

ದಾಸ ಸಾಹಿತ್ಯದ ಸುಮೇರು ಶ್ರೀಪಾದರಾಜರು

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ದಾಸ ಸಾಹಿತ್ಯವು ತನ್ನ ಶೈಲಿ ಹಾಗೂ ಭಾಷಾ ನಿರೂಪಣೆಯಲ್ಲಿ ವಿಭಿನ್ನವಾಗಿ ಗುರುತಿಸಿಕೊಂಡಿರುವುದೇ ಅಲ್ಲದೇ ಈ ಪ್ರಕಾರದ ಸಾಹಿತ್ಯವು ಕರ್ನಾಟಕ ಶಾಸ್ತ್ರೀಯ ಸಂಗೀತದೊಂದಿಗೆ ಅಮೃತದೊಂದಿಗೆ ಬೆರೆತ ಜೇನಿನಂತೆ ಮಿಳಿತಗೊಂಡು ಒಂದನ್ನೊಂದು ಬೇರ್ಪಡಿಸಲಾಗದಷ್ಟು ಸಂಬಂಧವು ಘನೀಕರಿಸಿಕೊಂಡಿದೆ. ಇತರೆ ಭಾಷೆಯ, ಅಷ್ಟೇಕೆ ನಮ್ಮದೇ ಅನ್ಯ ಪ್ರಕಾರದ ಬೇರ್ಯಾವುದೇ ಸಾಹಿತ್ಯವನ್ನು ದಾಸ ಸಾಹಿತ್ಯದೊಂದಿಗೆ ಹೋಲಿಸಿದಾಗ ಎದ್ದು ಕಾಣುವ ಪ್ರಮುಖ ಅಂಶ, ಈ ಸಾಹಿತ್ಯದ ವಾಕ್ ಪರಂಪರೆ, ಇದು ಗ್ರಂಥಸ್ಥವಾಗಿ ಉಳಿದು ಬಂದಿರುವುದಕ್ಕಿಂತಲೂ, ಜನರ ಬಾಯಲ್ಲಿ ನಿಂತಿರುವುದೇ ಹೆಚ್ಚು. ದಾಸ ಸಾಹಿತ್ಯವು ಆರಂಭಗೊಂಡಾಗಿನಿಂದಲೂ ತಲೆಮಾರುಗಳಿಂದ ಭಕ್ತರ ಹೃದಯದಲ್ಲಿ ವಾಕ್–ವಾಹಿನಿಯಾಗಿ ಹರಿಯುತ್ತಾ ಬಂದ ಇದಕ್ಕೆ ವಿಸ್ತಾರವಾದ ಹರವು ದೊರೆತಿದ್ದು ಕರ್ನಾಟಕ ಸಂಗೀತ ಪಿತಾಮಹರಾದ ಶ್ರೀ ಪುರಂದರದಾಸರಿಂದ. ಶ್ರೀಪುರಂದರದಾಸರು ಹಾಕಿಕೊಟ್ಟ ಮೇಲ್ಪಂಕ್ತಿಯಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳೊಂದಿಗೆ ಸುಲಲಿತವಾಗಿ ಬೆರೆತ ಈ ದಾಸ ಸಾಹಿತ್ಯವು ತದನಂತರ ಅವರ ಸಮಕಾಲೀನರಾದ ಕನಕದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಹಾಗೂ ಇನ್ನೂ ಹಲವಾರು ಮಹಿಮಾನ್ವಿತರು ದಾಸ ಸಾಹಿತ್ಯವು ಜನಮಾನಸದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಹಿಂದೆ ಇದ್ದ ರಾಗಗಳೊಂದಿಗೆ ಸುಮಧುರವಾಗಿ ಬೆಸೆದುಕೊಂಡು ಶತಮಾನಗಳಿಂದ ಹರಿದುಕೊಂಡು ಬಂದಿತು ಅಲ್ಲದೆ ಇದರೊಂದಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ನೂತನ ರಾಗಗಳ ಅನ್ವೇಷಣೆ, ಹೊಸ ಪ್ರಯೋಗಗಳು ಆರಂಭಗೊಂಡಿತು, ಇದಕ್ಕೆ ದಾಸ ಕೂಟವೂ ಸಹ ಒಂದು ರೀತಿಯ ಪ್ರೇರಣೆಯಾಗಿ ನಿಂತಿತು ಎಂದರೆ ಅತಿಶಯೋಕ್ತಿಯಲ್ಲ. ಇದರಿಂದಾಗಿ ದಾಸ ಸಾಹಿತ್ಯವು ವಾಕ್ ಸಂಪ್ರದಾಯದಲ್ಲಿ ದೊರೆಯುವ ಏಕೈಕ ಬೃಹತ್ ಸಂಗೀತ ಹಾಗೂ ಸಾಹಿತ್ಯದ ಪ್ರಕಾರವಾಗಿದೆ. ಈ ವಿಭಿನ್ನ ಪ್ರಕಾರದ ಸಾಹಿತ್ಯಕ್ಕೆ ಅದರಲ್ಲೂ ಕನ್ನಡ ಭಾಷೆಯಲ್ಲಿ ದಾಸ ಸಾಹಿತ್ಯವನ್ನು ಆರಂಭಿಸಿ ಅದು ಮುಂದೆ ಸವಿಸ್ತಾರವಾಗಿ ಬೆಳೆಯಲು ಭದ್ರ ಬುನಾದಿ ಹಾಕಿದವರಲ್ಲಿ ಪ್ರಥಮರು **ಶ್ರೀ ಶ್ರೀಪಾದರಾಜರು.**

ಸಾಯಂಕಾಲದ ವೇಳೆ ಹುಡುಗರು ತಮ್ಮ ದನಕರುಗಳನ್ನು ಮನೆಗೆ ಹೊಡೆದುಕೊಂಡು ಬರುತ್ತಿದ್ದರು, ದಾರಿಯಲ್ಲಿ ಶ್ರೀಗಳೊಬ್ಬರ ಮೇನೆ ಕಂಡು ಬಂತು. ಶ್ರೀಗಳು ಮೇನೆಯಿಂದ ತಲೆ ಹೊರ ಹಾಕಿ ದೂರದಲ್ಲಿದ್ದ ಓರ್ವ ಬಾಲಕನನ್ನು ಕಂಡು 'ಮಗೂ ಅಬ್ಬೂರು ಇನ್ನೂ ಎಷ್ಟು ದೂರವಿದೆಯಪ್ಪ?' ಎಂದು ಕೇಳಿದರು.

ಆ ಬಾಲಕ ಶ್ರೀಗಳಿಗೆ ನೇರವಾಗಿ ಉತ್ತರ ನೀಡದೆ 'ಇದೋ ಇಲ್ಲಿ ನನ್ನನ್ನು ನೋಡಿ, ಮನೆಗೆ ಹಿಂತಿರುಗುತ್ತಿರುವ ಈ ದನಗಳ ಮಂದೆಯನ್ನು ನೋಡಿ, ಪಶ್ಚಿಮ ದಿಕ್ಕಿನಲ್ಲಿರುವ ಸೂರ್ಯನನ್ನು ನೋಡಿ, ಈಗಲಾದರೂ ಅಬ್ಬೂರು ಎಷ್ಟು ದೂರದಲ್ಲಿದೆಯೆನ್ನುವುದು ವೇದ್ಯವಾಯಿತೆ?' ಎಂದು ನುಡಿದನು.

ಮುಸ್ಸಂಜೆಯಾಗುತ್ತಲಿದ್ದ ಕಾರಣ ಹಸುಗಳನ್ನು ಕೊಟ್ಟಿಗೆಗೆ ಹೊಡೆದುಕೊಂಡು ಹೋಗುವುದು ವಾಡಿಕೆಯಿದ್ದ ಕಾರಣ, ಶ್ರೀಗಳು ಕೇಳಿದ ಅಬ್ಬೂರು ತೀರ ಸಮೀಪದಲ್ಲಿಯೇ ಇದೆ ಎಂಬ ಅಂಶವನ್ನು ಆ ಬಾಲಕನು ಬಹಳ ಧ್ವನಿಪೂರ್ವಕವಾಗಿ ಹೇಳಿದ್ದನು. ಆದರೆ ಶ್ರೀಗಳಿಗೆ ಬಾಲಕನ ಕುಶಾಗ್ರಮತಿಯನ್ನು ಮುಖದ ವರ್ಚಸ್ಸನ್ನು ಕಂಡು ಬಹಳ ಸಂತಸವಾಯಿತು. ಮೇನೆಯಲ್ಲಿದ್ದ ಶ್ರೀಗಳು ಸ್ವರ್ಣವರ್ಣ ತೀರ್ಥರು, ಮಾರ್ಮಿಕವಾಗಿ ಉತ್ತರಿಸಿದ್ದ ಆ ಬಾಲಕನು ಲಕ್ಷ್ಮೀನಾರಾಯಣ. ಮುಂದೆ ಈ ಬಾಲಕ ಲಕ್ಷ್ಮೀನಾರಾಯಣನು ಮಧ್ವ ಮತದ ಅದರಲ್ಲೂ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿಭಿನ್ನವಾದ ಸಾಹಿತ್ಯ ಶೈಲಿಗೆ ಮೇಲ್ಪಂಕ್ತಿ ಹಾಕಿ ಭವ್ಯವಾದ ದಾಸ ಸಾಹಿತ್ಯದ ಉಗಮಕ್ಕೆ ಕಾರಣರಾದ ಶ್ರೀ ಶ್ರೀಪಾದರಾಯರು.

ಮಧ್ವ ಮತದಲ್ಲಿ ಶ್ರೀಪಾದರಾಜರನ್ನು ವಿಷ್ಣುವಿನ ಭಕ್ತನಾದ **'ಧ್ರುವ'**ನ ಅಂಶಾವತಾರವೆಂದು ಪರಿಗಣಿಸಲಾಗಿದೆ. ಮಧ್ವ ಮತದ ಸಿದ್ಧಾಂತಗಳು ಅದರಲ್ಲೂ, ಕನ್ನಡ ಭಾಷೆಯಲ್ಲಿ ಭಕ್ತಿ ಸಾಹಿತ್ಯದ ಪ್ರಕಾರವನ್ನು **'ರಂಗ ವಿಠಲ'** ಎಂಬ ಅಂಕಿತನಾಮದೊಂದಿಗೆ ಪ್ರಾರಂಭಿಸಿ, ಅದನ್ನು ಸಾಮಾನ್ಯ ಜನರಿಗೂ ತಲುಪುವಂತೆ ಮಾಡಿ ಮುಂದೆ **'ದಾಸ ಸಾಹಿತ್ಯ'**ವೆಂದು ವಿಭಿನ್ನವಾಗಿ ಗುರುತಿಸಿಕೊಳ್ಳುವಲ್ಲಿ ಸಾಹಿತ್ಯ ಕ್ರಾಂತಿ ಹಾಡಿದವರು ಶ್ರೀ ಶ್ರೀಪಾದರಾಜರು ಮೊದಲಿಗರು. ಆದ ಕಾರಣ ಇವರನ್ನು **'ದಾಸ ಸಾಹಿತ್ಯ ಪಿತಾಮಹ'** ಎಂದು ಕರೆಯಲಾಗಿದೆ. ಶ್ರೀ ಶ್ರೀಪಾದರಾಜರು ಶ್ರೀ ವ್ಯಾಸರಾಯರಿಗೆ ಹಾಗೂ ಶ್ರೀಪುರಂದರದಾಸರಿಗೆ ಗುರುಗಳು ಹಾಗೂ ಇವರನ್ನು ಶ್ರೀಮಧ್ವಾಚಾರ್ಯರ ನೇರ ಶಿಷ್ಯರಲ್ಲೊಬ್ಬರಾದ **ಶ್ರೀಪದ್ಮನಾಭ ತೀರ್ಥರ** ಮತದ ಪರಂಪರೆಯಲ್ಲಿ ಗುರುತಿಸಲಾಗಿದೆ.

ಶ್ರೀಪಾದರಾಜರು ಜನಿಸಿದ್ದು 1404ರ ಆಸುಪಾಸಿನಲ್ಲಿ, ಚೆನ್ನಪಟ್ಟಣ ತಾಲ್ಲೂಕಿನ ಅಬ್ಬೂರು ಗ್ರಾಮದಲ್ಲಿ, ತಂದೆ ಶೇಷಗಿರಿ, ತಾಯಿ ಗಿರಿಯಮ್ಮ, ಬಾಲಕನಿಗೆ ಲಕ್ಷ್ಮೀನಾರಾಯಣ ಎಂದು ನಾಮಕರಣ. ಶ್ರೀಬ್ರಹ್ಮಣ್ಯೇಂದ್ರ ತೀರ್ಥರು ಹಾಗೂ ಲಕ್ಷ್ಮೀನಾರಾಯಣ ಇಬ್ಬರೂ ಹೆಚ್ಚು ಕಡಿಮೆ ಒಂದೇ ವಯಸ್ಸಿನ ಸೋದರ ಸಂಬಂಧಿಗಳು. ಮೇಲೆ ತಿಳಿಸಿದ ಘಟನೆಯಿಂದ ಪ್ರಭಾವಿತರಾದ ಶ್ರೀ ಸ್ವರ್ಣವರ್ಣ ತೀರ್ಥರು ಬಾಲಕ ಲಕ್ಷ್ಮೀನಾರಾಯಣನಿಗೆ ಉಪನಯನವನ್ನು ಮಾಡಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ತಮ್ಮ ಸ್ವಂತ ಸ್ಥಳವಾದ ಶ್ರೀರಂಗಕ್ಕೆ ಕರೆದೊಯ್ಯುತ್ತಾರೆ. 1411ರಲ್ಲಿ ಸನ್ಯಾಸ ದೀಕ್ಷೆ ಪಡೆದ ಲಕ್ಷ್ಮೀನಾರಾಯಣನನ್ನು ಹೆಚ್ಚಿನ

ವೇದಾಧ್ಯಯನಕ್ಕೆ ಶ್ರೀವಿಭುದೇಂದ್ರ ತೀರ್ಥರಲ್ಲಿಗೆ ಕಳುಹಿಸಲಾಗುತ್ತದೆ. ಏತನ್ಮಧ್ಯೆ ಲಕ್ಷ್ಮೀನಾರಾಯಣನಿಗೆ ಉತ್ತರಾದಿ ಮಠದ ಶ್ರೀ ರಘುನಾಥ ತೀರ್ಥರ ಪರಿಚಯವಾಗುತ್ತದೆ. ಒಮ್ಮೆ ಸ್ವರ್ಣಾವರ್ಣ ತೀರ್ಥರು ಕೊಪ್ಪಾರದಲ್ಲಿ ಚಾತುರ್ಮಾಸ್ಯಕ್ಕೆ ಬೀಡು ಬಿಟ್ಟಾಗ ಒಂದು ಸಂದರ್ಭದಲ್ಲಿ ಯುವ ಲಕ್ಷ್ಮೀನಾರಾಯಣನು ಶ್ರೀಸುಧಾದ ಅತ್ಯಂತ ಕ್ಲಿಷ್ಟಕರ ಸಾಲುಗಳನ್ನು ನಿರರ್ಗಳವಾಗಿ ಅದರ ತಾತ್ಪರ್ಯವನ್ನು ವಿಶ್ಲೇಷಿಸಿ ವಿವರಿಸುತ್ತಾನೆ. ಗುರುಗಳಾದಿಯಾಗಿ ಅಲ್ಲಿ ನೆರೆದಿದ್ದ ವಿಪ್ರ ಸಮೂಹವು ಇದರಿಂದ ಸಂತಸಪಟ್ಟು ಲಕ್ಷ್ಮೀನಾರಾಯಣನನ್ನು **'ಶ್ರೀಪಾದರಾಜ'** ಎಂದು ಬಿರುದು ನೀಡಿ ಕರೆಯುತ್ತಾರೆ.

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಕೆಲ ಬದಲಾವಣೆಗಳನ್ನು ತರುವಲ್ಲಿ **ಶ್ರೀಪಾದರಾಜರು** ಮೊದಲಿಗರು ಹಾಗೂ ಅವರ ಕೊಡುಗೆಗಳು ಈ ಕೆಳಕಂಡಂತಿವೆ:

- ಶ್ರೀಪಾದರಾಯರ ಒಂದು ಕೃತಿಯಲ್ಲಿ ತಂಬೂರಿಯ ಬಳಕೆಯು ಪ್ರಥಮವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಕಂಡು ಬರುತ್ತದೆ.
- ಶ್ರೀಪಾದರಾಯರು ಕರ್ನಾಟಕ ಶಾಸ್ತ್ರೀಯ ಸಂಗೀತದ ತಾಳಗಳಲ್ಲಿ ಕೆಲವು ತಾಳಗಳಾದ ಮಾರ್ಗ, ದೇಶಿ, ಶಂಕರ, ಮಿಶ್ರ ಇತ್ಯಾದಿ ತಾಳಗಳನ್ನು ಬೇರ್ಪಡಿಸುವ ಮುಖಾಂತರ ಹಾಗೂ ಸುಳಾದಿ ಸಪ್ತ ತಾಳಗಳನ್ನೇ ಬಳಸುತ್ತಾ ಕ್ರಾಂತಿಕಾರಕ ಬದಲಾವಣೆಗಳಿಗೆ ಬುನಾದಿ ಹಾಕಿಕೊಟ್ಟರು.
- ಕನ್ನಡ ದಾಸ ಸಾಹಿತ್ಯದಲ್ಲಿ ಹೊಸ ಪ್ರಕಾರವಾದ ಸುಳಾದಿ, ದಂಡಕ, ಇತ್ಯಾದಿಗಳ ಅಳವಡಿಕೆ ಹಾಗೂ ಬಳಕೆ ಆರಂಭಿಸಿದವರಲ್ಲಿ ಶ್ರೀಪಾದರಾಯರು ಮೊದಲಿಗರು. ಕಾಲಾನುಕ್ರಮವಾಗಿ ನಂತರ ಬಂದ ಹರಿದಾಸರುಗಳು ಶ್ರೀಪಾದರಾಜರ ಇದೇ ಪದ್ಧತಿಯನ್ನೇ ಅನುಸರಿಸಿ ಹರಿದಾಸ ಸಾಹಿತ್ಯವು ವಿಸ್ತಾರಗೊಳ್ಳುವಲ್ಲಿ ನೆರವಾದರು.
- ವೃತ್ತನಾಮಗಳು ಮಧ್ವ ಯತಿಗಳ ರಚನೆಗಳಾಗಿದ್ದು, ಬಹುಶಃ ಇದು ಆರಂಭಗೊಂಡಿದ್ದು ಶ್ರೀ ಶ್ರೀಪಾದರಾಯರಿಂದಲೇ ಇರಬೇಕು. ವೃತ್ತನಾಮಗಳ ವಿಶೇಷವೇನೆಂದರೆ ಈ ಶೈಲಿಯ ಕೃತಿಗಳ ರಚನೆಗಳಲ್ಲಿ ತಾಳಬದ್ಧ ಹಾಗೂ ತಾಳಕ್ಕೆ ಹೊಂದಿಲ್ಲದ ಎರಡು ಬಗೆಗಳು ಒಂದಕ್ಕೊಂದರ ನಂತರ ಪುನರಾವರ್ತನೆಯಾಗುತ್ತದೆ.
- ಶ್ರೀ ಶ್ರೀಪಾದರಾಯರು ಕೇವಲ ಕನ್ನಡದಲ್ಲೇ **ದಂಡಕ** ಅಥವಾ ಉದ್ದಂಡವನ್ನು ರಚಿಸಿದ್ದಾರೆ.
- ಶ್ರೀ ಶ್ರೀಪಾದರಾಯರು ವಿಜಾತಿ ಸ್ವರಗಳಲ್ಲಿ ಕೀರ್ತನೆಯೊಂದನ್ನು ರಚಿಸಿದ್ದು ಇದು ರುಕ್ಮಿಣಿ ಮತ್ತು ಸತ್ಯಭಾಮೆಯರ ಸಂಭಾಷಣೆಯಲ್ಲಿದೆ. ಇದರಲ್ಲಿ ಎರಡು ಬಗೆಯ ವಿಭಿನ್ನ ರಾಗಗಳನ್ನು ಒಂದರ ನಂತರ ಒಂದು ಆವರ್ತನೆಗೊಳ್ಳುತ್ತದೆ.
- ಶ್ರೀ ಶ್ರೀಪಾದರಾಯರು ಜೋಗುಳದ ರಚನೆಗಳನ್ನು ರಚಿಸಿದ್ದು ಅವು ಶ್ರೀಕೃಷ್ಣನ ಮುರಳಿ ಗಾನದ ಹಿರಿಮೆಯನ್ನು ಕುರಿತಾಗಿದ್ದು, ವೇಣು ಗೀತ ಎಂದು ಕರೆಯಲ್ಪಟ್ಟಿದೆ. ಅಲ್ಲದೆ ಭಾಗವತ ಪುರಾಣವನ್ನು ಆಧರಿಸಿ ಶ್ರೀಪಾದರಾಯರು **ಗೋಪಿ ಗೀತ** ಹಾಗೂ **ಭ್ರಮರ ಗೀತ** ಎಂಬ ಎರಡು ರಚನೆಗಳನ್ನು ರಚಿಸಿದ್ದಾರೆ.

- ಮತ್ತೊಂದು ಪ್ರಮುಖ ಅಂಶವೇನೆಂದರೆ ಶ್ರೀ ಶ್ರೀಪಾದರಾಜರು ತಮ್ಮ ರಚನೆಗಳಲ್ಲಿ ಜನಪದ ಸಂಗೀತ ಹಾಗೂ ನಾಟಕ ರಂಗದ ಸಂಗೀತಗಳ ವಸ್ತುಗಳನ್ನು ಆಧರಿಸಿ ವಿಭಿನ್ನ ರೀತಿಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತದ ಸಂಗ್ರಹವನ್ನು ವಿಸ್ತರಿಸಿದರು.

ಮುಂದೆ ಶ್ರೀಪಾದರಾಜರು ನಾಡಿನಾದ್ಯಂತ ಮಧ್ವ ಮತದ ಪ್ರಚಾರ ಹಾಗೂ ದಾಸ ಸಾಹಿತ್ಯದ ಕೃಷಿಯಲ್ಲಿ ಅವಿರತವಾಗಿ ತೊಡಗಿಸಿಕೊಳ್ಳುತ್ತಾರೆ. ಕ್ರಿ.ಶ. 1471ರಲ್ಲಿ ಸಳುವ ನರಸಿಂಹನು ತನ್ನ ಪಾಪ ದೋಷದ ನಿವಾರಣೆಗೆ ಶ್ರೀಪಾದರಾಜರಲ್ಲಿ ಶರಣಾದಾಗ, ಯತಿಗಳು ತಮ್ಮ ತಪೋಬಲದಿಂದ ದೋಷವನ್ನು ನಿವಾರಿಸುತ್ತಾರೆ. ದೋಷಮುಕ್ತನಾದ ಸಳುವ ನರಸಿಂಹನು ಇವರಿಗೆ ತನ್ನ ಸಿಂಹಾಸನದಲ್ಲಿ ಕೂಡಿಸಿ ಕನಕಾಭಿಷೇಕವನ್ನು ನೆರವೇರಿಸುತ್ತಾನೆ. ಮುಂದೆ ವಿಜಯನಗರದ ದೊರೆ ಹಕ್ಕರಾಯನು ಶ್ರೀಪಾದರಾಜರನ್ನು ರಾಜಗುರುಗಳಾಗಲು ಕೋರಿದಾಗ ನಿರಾಕರಿಸಿ ತಮ್ಮ ಶಿಷ್ಯ ಶ್ರೀವ್ಯಾಸರಾಜರನ್ನು ಕಳುಹಿಸುತ್ತಾರೆ. ಇದರಿಂದಾಗಿ ಶ್ರೀವ್ಯಾಸರಾಜರು ವಿಜಯನಗರ ದೊರೆಗಳ ರಾಜಗುರುಗಳಾಗುತ್ತಾರೆ.

ತಮ್ಮ ಗುರುಗಳಾದ ಶ್ರೀಸ್ವರ್ಣಾವರ್ಣ ತೀರ್ಥರು ಬೃಂದಾವನಸ್ಥರಾದಾಗ ಶ್ರೀಪಾದರಾಜರು ಶ್ರೀರಂಗಂನಿಂದ ಮುಳುಬಾಗಿಲಿಗೆ ಬಂದು ನೆಲೆಸಿ, ಅಲ್ಲಿದ್ದ ಮಠವನ್ನು ದಕ್ಷಿಣ ಭಾರತದ ಮಹೋನ್ನತವಾದ ಮಧ್ವ ತತ್ವ ಸಿದ್ಧಾಂತದ ಅಧ್ಯಯನ ಕೇಂದ್ರವನ್ನಾಗಿ ಮಾರ್ಪಡಿಸುವಲ್ಲಿ ಶ್ರಮಿಸುತ್ತಾರೆ. ಕ್ರಿ.ಶ. 1504ರಲ್ಲಿ ತಮ್ಮ ಶಿಷ್ಯರಲ್ಲೊಬ್ಬರಾದ ಶ್ರೀಹಯಗ್ರೀವ ತೀರ್ಥರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿ ಜ್ಯೇಷ್ಠ ಶುದ್ಧ ಚತುರ್ದಶಿಯಂದು ಮುಳಬಾಗಿಲಿನ ನರಸಿಂಹ ತೀರ್ಥದ ಬಳಿ ಸಶರೀರರಾಗಿ ಬೃಂದಾವನಸ್ಥರಾಗುತ್ತಾರೆ.

ಶ್ರೀ ಶ್ರೀಪಾದರಾಜರು ತಮ್ಮ ಕಾಲದಲ್ಲಿ ಹಲವು ವಿಸ್ಮಯಗಳು ಹಾಗೂ ಪವಾಡಗಳನ್ನು ಮಾಡಿದುದಲ್ಲದೆ, ವಿಧರ್ಮೀಯರ ದಾಳಿಗಳಿಗೆ ತುತ್ತಾಗಿದ್ದ ಹಿಂದೂ ಧರ್ಮದ ಬೇರುಗಳನ್ನು ತಮ್ಮ ಆಧ್ಯಾತ್ಮ ಶಕ್ತಿಯಿಂದ ಹಾಗೂ ಪ್ರಖರ ಜ್ಞಾನ ತೇಜಸ್ಸಿನಿಂದ ಪುನರುಜ್ಜೀವನಗೊಳಿಸಿ ಜನ ಸಮುದಾಯದ ಮನೋದಾರ್ಢ್ಯವು ಹಾಗೂ ನೈತಿಕ ಪ್ರಜ್ಞೆಯು ಅಲುಗಾಡದಂತೆ ಹಾಗೂ ಆಳರಸರು ಹಿಂದೂ ಧರ್ಮ ರಕ್ಷಣೆಗೆ ನಿಂತು ಹೋರಾಡುವಲ್ಲಿ ದಿವ್ಯ ಶಕ್ತಿಯಾಗಿ ಪ್ರಕಟಗೊಳ್ಳುತ್ತಾರೆ, ಇದರಿಂದಾಗಿ ಮುಂದೆ ಶ್ರೀವಿದ್ಯಾರಣ್ಯರು, ಶ್ರೀ ವ್ಯಾಸರಾಯರು ಮುಂತಾದವರ ಅನುಗ್ರಹದಲ್ಲಿ ಭಾರತದಲ್ಲಿ ಬಲಾಢ್ಯ ವಿಜಯನಗರ ಹಿಂದೂ ಸಾಮ್ರಾಜ್ಯವು ತಲೆ ಎತ್ತುವಲ್ಲಿ ನಾಂದಿಯಾಗುತ್ತದೆ. ಕನ್ನಡ ಸಾಹಿತ್ಯ ಅಲ್ಲದೆ ಕರ್ನಾಟಕ ಸಂಗೀತ ಪರಂಪರೆಗೆ ಶ್ರೀ ಶ್ರೀಪಾದರಾಜರ ಕೊಡುಗೆಗಳು ಅನನ್ಯ ಹಾಗೂ ಅವಿಸ್ಮರಣೀಯವಾದುದು. ಪ್ರಾತಃಸ್ಮರಣೀಯರಾದಂತಹ ಇಂತಹ ಮಹಾಮೇರು ಪುರುಷರಿಗೆ ನನ್ನ ಅನಂತಾನಂತ ವಂದನೆಗಳು.

(ಡಾ॥ ಎಸ್.ಸಿ. ಶರ್ಮ)
ಶಿಕ್ಷಣ ತಜ್ಞರು ಹಾಗೂ ಸಂಗೀತಜ್ಞರು

ಬಂಡ



ರವೀಂದ್ರ ಸಂಗೀತ:
ಉಗಮ ಹಾಗೂ ತತ್ವ – ಒಂದು ವಿಶ್ಲೇಷಣೆ

ಭಾರತೀಯ ಸಂಗೀತ ಪ್ರಕಾರಗಳಲ್ಲಿ **ರವೀಂದ್ರ ಸಂಗೀತ** ಅಥವಾ **ರಬೀಂದ್ರ ಸಂಗೀತ** ವಿಶಿಷ್ಟವಾದ ಪ್ರಕಾರಗಳಲ್ಲಿ ಒಂದು, ಕಾರಣ ಇದರ ಉಗಮ ಹಾಗೂ ನಡೆದು ಬಂದ ಹಾದಿ ಬಹಳ ವಿಭಿನ್ನವಾದುದು. 19ನೇ ಶತಮಾನದ ಉತ್ತರಾರ್ಧ ಮತ್ತು 20ನೇ ಶತಮಾನದ ಪೂರ್ವಾರ್ಧದಲ್ಲಿ ವಸಾಹತು ಆಡಳಿತದಿಂದಾಗಿ ಬಂಗಾಳದಲ್ಲಿ ಉಂಟಾದ ಹಲವು ರಾಜಕೀಯ ತಲ್ಲಣಗಳ ಮತ್ತು ಸಾಮಾಜಿಕ ಸ್ಥಿತ್ಯಂತರಗಳ ಪರಿಣಾಮದಿಂದಾಗಿ ಅಲ್ಲಿನ ಕಲೆ, ಸಾಹಿತ್ಯ ಮತ್ತು ಸಂಗೀತದಲ್ಲಿ ವ್ಯತಿರಿಕ್ತ ಪರಿಣಾಮಗಳುಂಟಾಗಿ ಅವುಗಳ ಅಂತಃಸತ್ವವನ್ನು ಹಾಗೂ ಅದರೊಂದಿಗೆ ಪಾಶ್ಚಾತ್ಯ ಪ್ರಭಾವವು ಇಲ್ಲಿನ ಎಲ್ಲ ಕಲಾ ಪ್ರಾಕಾರಗಳಲ್ಲಿ ಬೆರೆಯಲಾರಂಭಿಸಿ ಇಲ್ಲಿ ಜಡ್ಡುಗಟ್ಟಿದ್ದ ಏಕತಾನತೆ ಹಾಗೂ ಗೊಡ್ಡು ಸಾಂಪ್ರದಾಯಿಕತೆಯ ಬೇರನ್ನೇ ಅಲುಗಾಡಿಸಿತು. ಅದರೊಂದಿಗೆ ಜನ-ಜೀವನದ ಎಲ್ಲ ಬಗೆಯ ಸಾಂಸ್ಕೃತಿಕ ಹಾಗೂ ಬೌದ್ಧಿಕ ಸ್ತರಗಳಲ್ಲಿ ಹೊಸ ಶಕೆಯ ಅರುಣೋದಯಕ್ಕೆ ಹಲವು ಕವಿಗಳ, ಸಾಹಿತಿಗಳ, ಸಮಾಜ ಚಿಂತಕರ ಪ್ರಜ್ಞೆ ಒಗ್ಗೂಡಿ ಮೊಳೆತು ವೈವಿಧ್ಯಮಯ ಸಮ್ಯಗ್ ಜೀವನ ದೃಷ್ಟಿಯ ಉತ್ಥಾನಕ್ಕೆ ಕಾರಣವಾಗಿ ಹೊಸ ವಿಕಾಸಕ್ಕೆ ನಾಂದಿ ಹಾಡಿತು. ಇವರಲ್ಲಿ ಪ್ರಥಮರೆಂದರೆ ರಾಮಕೃಷ್ಣ ಪರಮಹಂಸ, ರಾಜಾ ರಾಂ ಮೋಹನ್ ರಾಯ್, ಬಂಕಿಂಮ ಚಂದ್ರ ಚಟರ್ಜಿ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಠಾಗೂರ್, ಇನ್ನೂ ಅನೇಕರು, ಇದನ್ನು **'ಬಂಗಾಳದ ಪುನರುಜ್ಜೀವನ'** ಅಥವಾ **'ಬಂಗಾಳದ ಜಾಗೃತಿ/ಪುನಶ್ಚೇತನ'** ಎಂದು ಕರೆಯಲಾಗಿದೆ. ಇದು ವ್ಯಕ್ತಿ ಹಾಗೂ ಸಮಷ್ಠಿ ತತ್ವದ ದೃಷ್ಟಿಯನ್ನು ಒಳಗೊಂಡ ಸಮ್ಮಿಶ್ರ ಪರಿಕಲ್ಪನೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನವ ಮುನ್ನುಡಿ ಬರೆಯಿತು. ಇದೇ ಸಂದರ್ಭದಲ್ಲಿ ಮಧ್ಯಕಾಲೀನ ಯುಗದಲ್ಲಿ ಯೂರೋಪಿನಲ್ಲಿ ಆರಂಭಗೊಂಡಂತಹ ಪುನರುಜ್ಜೀವನದ ಪ್ರಮುಖ ಅಂಶವಾದ ಮಾನವತಾವಾದದ ಪಾಶ್ಚಾತ್ಯ ದೃಷ್ಟಿಕೋನಕ್ಕೆ ತೆರೆದುಕೊಂಡಿತು. ಇಂತಹ ಪುನರುಜ್ಜೀವನ ಸಮಯದಲ್ಲಿ ಹಾಗೂ ಸಾಮಾಜಿಕ ಪರಿಸರದಲ್ಲಿ, ಭೂಮಾಲೀಕರ ಕುಟುಂಬದಲ್ಲಿ ಬೆಳೆದ **ರವೀಂದ್ರನಾಥ ಠಾಗೂರರು** ತಮ್ಮ ತಂದೆ ಮಹರ್ಷಿ ದೇವೇಂದ್ರನಾಥ ಠಾಗೂರ್‌ರವರ ದಿಗ್ದರ್ಶನ ಹಾಗೂ **'ಬ್ರಹ್ಮೋ ಸಮಾಜ'**ದ ವಿಚಾರಧಾರೆಯ ದೃಷ್ಟಿಯಲ್ಲಿ ಅಂದಿನ ಸಾಮಾಜಿಕ, ರಾಜಕೀಯ ಹಾಗೂ ಭಾರತದ ಪರಾಧೀನ ಸ್ಥಿತಿಯನ್ನು ಸಮಗ್ರವಾಗಿ ಕಂಡು ಜನ ಮಾನಸವನ್ನು ಆವರಿಸಿದ್ದ ಅಂಧಕಾರವನ್ನು ನಿವಾರಿಸುವ ನಿಟ್ಟಿನಲ್ಲಿ ಸನಾತನ ಧರ್ಮದ ವಿಶ್ವಮಾನ್ಯ ಧ್ಯೇಯೋದ್ದೇಶ ಹಾಗೂ ಆದರ್ಶಗಳಿಗೆ ಅದರಲ್ಲೂ ಉಪನಿಷತ್‌ನ ವಿಚಾರಗಳಿಗೆ ಪ್ರಭಾವಿತರಾಗಿ, ಅವುಗಳಿಂದಲೇ ಭಾರತೀಯರ ದಾಸ್ಯ ಮುಕ್ತಿಗೆ ಪರಿಹಾರದ ಮಾರ್ಗವನ್ನೂ ಹಾಗೂ ಸಾಮರಸ್ಯದ ಹೊನಲನ್ನು ಕಂಡುಕೊಂಡರು–ಅದುವೇ

ಮೊದಲಿಗೆ ಅವರು ಪಡೆದ ಬ್ರಹ್ಮಾಂಡದೊಂದಿಗೆ ಅಥವಾ ವಿಶ್ವಾತ್ಮನಲ್ಲಿ ಆತ್ಮನ ಸಂಯೋಗ. ಅವರ ಕೇವಲ ಜ್ಞಾನ ದೃಷ್ಟಿಕೋನವು ಮುಂದೆ ಹಲವು ಕಲಾ ಪ್ರಕಾರಗಳಿಗೆ ಮೂಲ ತತ್ವವಾಗಿ ಆವಿರ್ಭವಿಸಿ **"ರಬೀಂದ್ರ ಸಂಗೀತ"** ಎಂಬ ವಿಶಿಷ್ಟ ಸಂಗೀತ ಪ್ರಕಾರದ ವಿಕಸನಕ್ಕೆ ಎಡೆ ಮಾಡಿಕೊಡುತ್ತವೆ.

'ಕ್ಷಣೇ ಕ್ಷಣೇ ಯನ್ನವತಾಮುಪೈತಿ ತದೇವ ರೂಪಂ ರಮಣೀಯತಾಯಾಃ' (ಪ್ರತಿ ಕ್ಷಣವೂ ಹೊಸತನ್ನು ಪಡೆಯುವುದೇ ನಿಜವಾದ ರಮಣೀಯ ರೂಪ) ಸಂಸ್ಕೃತದ ಈ ಒಂದು ಸುಭಾಷಿತವು ಎಲ್ಲ ಕಾಲಗಳಲ್ಲಿಯೂ ಕಲೆಗೆ ಅದರಲ್ಲೂ ಸಂಗೀತಕ್ಕೆ ಬಹಳ ಅನ್ವರ್ಥವಾಗಿದೆ. ಶುದ್ಧ ಶಾಸ್ತ್ರೀಯ ನೆಲೆಗಟ್ಟಿನ ತಳಹದಿಯ ಮೇಲೆ ನಿರ್ಮಿತವಾದಂತಹ ಯಾವುದೇ ಸಂಗೀತ ಪ್ರಕಾರವನ್ನು ನಾವು ವಿಭಿನ್ನ ಆಯಾಮಗಳಲ್ಲಿ ಬಗೆದು ನೋಡಿದಾಗ ಹೊಸ, ಹೊಸ ಒಳನೋಟಗಳು ಲಭಿಸುತ್ತದೆ, ಈ ರೀತಿ ಛೇದನ ಅಥವಾ ವೈಜ್ಞಾನಿಕ ವರ್ಗೀಕರಣ ಕ್ರಿಯೆಯು (Dissection) ಒಂದರ್ಥದಲ್ಲಿ ಪಾಶ್ಚಾತ್ಯ ಅಧ್ಯಯನ/ಸಂಶೋಧನಾ ಕ್ರಮಗಳಲ್ಲಿ ಪ್ರಮುಖ ಅಂಶವಾಗಿದ್ದು, ಇದು ನಮಗೆ ಬಂದ ಬಳುವಳಿ ಎನ್ನಬಹುದು. ಆದರೆ ಈ ಪದ್ಧತಿಯು ನಿರಂತರ ಅಧ್ಯಯನ, ನಿಶಿತಮತಿ ಹಾಗೂ ಅಧ್ಯಯನ ವಸ್ತುವಿನ ಕುರಿತು ಗೌರವ ಇವುಗಳನ್ನು ಒಳಗೊಂಡಿದ್ದು, ಅದಕ್ಕಾಗಿ ಸೂಕ್ತ ಸಂದರ್ಭಕ್ಕೆ ಎದುರು ನೋಡಬೇಕಾಗುತ್ತದೆ. ಹಾಗೆಯೇ ಸಂಗೀತ ಕುರಿತಾಗಿ ಗುರುದೇವ ರವೀಂದ್ರನಾಥ ಠಾಗೂರರ ಈ ರೀತಿಯ ಅನ್ವೇಷಣಾ ಕ್ರಮದ ಫಲಶ್ರುತಿಯೇ **'ರಬೀಂದ್ರ ಸಂಗೀತ'**ದ ಉಗಮಕ್ಕೆ ಮೂಲ ಎನ್ನಬಹುದು. ಶ್ರೀ ರವೀಂದ್ರನಾಥ ಠಾಗೂರರು ಒಂದೆಡೆ ಹೀಗೆ ಹೇಳುತ್ತಾರೆ **'ಸಂಗೀತ ಅಥವಾ ಗಾಯನದ ಮೂಲಕ ಜಗತ್ತನ್ನು ನೋಡಿದಾಗ ನಾನು ಅವನನ್ನು (ವಿಶ್ವಾತ್ಮ ಅಥವಾ ವಿಶ್ವಪ್ರಜ್ಞೆ) ನೋಡಲು ಸಾಧ್ಯವಾಗುತ್ತದೆ'**. ರವೀಂದ್ರರಿಗೆ ಸಂಗೀತ ಬೆಳಕು ಹಾಗೂ ಕತ್ತಲಿನ ಒಂದು ಆನಂದದಾಯಕವಾದ ಕ್ರಾಂತಿ ಅಥವಾ ನಿರಂತರ ಬದಲಾವಣೆಯ ಪ್ರಕ್ರಿಯೆಯಾಗಿತ್ತು. ಬಂಗಾಳದ ನವೋದಯದ ಕಾಲ ಸಂದರ್ಭದಲ್ಲಿ ಉಗಮಿಸಿದ ರವೀಂದ್ರರ ಈ ಸಂಗೀತದ ಪ್ರಕಾರವು ಹೊಸ ಸಂಚಲನವನ್ನು ಸೃಷ್ಟಿ ಮಾಡಿದ್ದು, ಇದರ ಆಂತರ್ಯವು ಮಾನವನ ಯಾವುದೇ ಆನಂದೋನ್ಮಾದಕ್ಕೆ ಕಾರಣವಾಗುವ ಹಾಗೂ ಆತ್ಮ ಪ್ರಜ್ಞೆ/ದರ್ಶನದ ಮೂಲಕ ತನ್ನನ್ನು ತಾನು ಅರಿತುಕೊಳ್ಳುವ ಮಾರ್ಗದಲ್ಲಿ ಅಭಿವ್ಯಕ್ತವಾಗುವ ಶುದ್ಧ ಕ್ರಿಯೆಯ ವ್ಯುತ್ಪತ್ತಿಯೇ **'ರಬೀಂದ್ರ ಸಂಗೀತ'**ದ ಮೂಲ ಬಿಂದು ಎನ್ನಬಹುದು. ಇಂದು ಭಾರತ ಹಾಗೂ ಬಾಂಗ್ಲಾದೇಶಗಳ ರಾಷ್ಟ್ರಗೀತೆಗಳು ಆಯ್ಕೆಗೊಂಡಿರುವುದು ರವೀಂದ್ರರ ಸಾಹಿತ್ಯ ಹಾಗೂ ಅದರ ಸಂಗೀತ ಸಂಯೋಜನೆಯು ರಬೀಂದ್ರ ಸಂಗೀತದ ಆಧಾರ ಮೇಲೆಯೇ.

19ನೇ ಶತಮಾನದಲ್ಲಿ ಬಂಗಾಳದಲ್ಲಿ ಎಲ್ಲ ಭಾರತೀಯ ಸಂಗೀತ ಮೂಲಗಳ ಹಾಗೂ ಶಾಸ್ತ್ರೀಯ ಪ್ರಕಾರಗಳ ಪ್ರಮುಖ ಗ್ರಂಥಗಳ ತರ್ಜುಮೆ/ಭಾಷಾಂತರದ ಬೃಹತ್ ಕಾರ್ಯವು ಆರಂಭಗೊಂಡಿತ್ತು. ಭಾರತೀಯ ಸ್ವರ ಪ್ರಸ್ತಾರ ಶೈಲಿಯನ್ನು ಸರಳೀಕರಿಸುವ ಪ್ರಯತ್ನವೂ ಸಹ ನಡೆಯಿತು. ಬಂಗಾಳಿ ಭಾಷೆಯ ಕಾವ್ಯ–ಸಾಹಿತ್ಯಗಳಿಗೆ ಸ್ವರ ಪ್ರಸ್ತಾರದ ಬಳಕೆಯಲ್ಲಿ ಪಾಶ್ಚಿಮಾತ್ಯ ರಾಗಗಳ, ಪ್ರಕಾರಗಳ ಹಾಗೂ ಶೈಲಿ/ಲಕ್ಷಣಗಳ ವ್ಯವಸ್ಥಿತ ಹಾಗೂ ಕ್ರಮಬದ್ಧ ಅಧ್ಯಯನ ಹಾಗೂ

ಅಳವಡಿಸುವಿಕೆಗೆ ನಿರಂತರ ಪರಿಶ್ರಮವೂ ಸಹ ನಡೆಯಿತು. ಭಾರತದ ಯಾತ್ರಿಗಳೆಂದು ಗುರುತಿಸಿಕೊಂಡು ಮುಂಚೂಣಿಯಲ್ಲಿದ್ದ ರವೀಂದ್ರನಾಥ್ ಠಾಗೂರ್ ಮತ್ತು ರಾಜಾರಾಂ ಮೋಹನ್ ರಾಯ್, ಇವರುಗಳು ಬಂಗಾಳಿ ಭಾಷೆಯ ವಿವಿಧ ಬಗೆಯ ಜಾನಪದ ಹಾಗೂ ಸಾಂಪ್ರದಾಯಿಕ ಕೃತಿ–ರಚನೆಗಳ ಸಂಪತ್ತಿನ ಅನ್ವೇಷಣೆಯಲ್ಲಿದ್ದರು.

ವಿಶ್ವಭಾರತಿ ಸಂಗೀತ ಮಂಡಳಿಯು 2,500ರಕ್ಕೂ ಹೆಚ್ಚಿನ ಕೃತಿ/ಸಾಹಿತ್ಯಗಳಿಗೆ ಸ್ವತಃ ಗುರುದೇವ ರವೀಂದ್ರರಿಂದ ಸ್ವರ ಪ್ರಸ್ತಾರ ಹಾಗೂ ಸಂಯೋಜನೆ ಮಾಡಲ್ಪಟ್ಟ ಪರಿಶುದ್ಧ ರೂಪದ ರಾಗಗಳ ಸಂಗ್ರಹವು ಇದ್ದು, ಅವು ಭಾರತೀಯರಿಗೆ ಹಾಗೂ ಮನುಕುಲಕ್ಕೆ ಗುರುದೇವರ ಅತ್ಯಮೂಲ್ಯ ಕೊಡುಗೆಯಾಗಿದೆ. ಈ ಎಲ್ಲ ರಾಗಗಳು ಭಾವಾವೇಗದ ಸಮೃದ್ಧ ಮೂಲ ಸತ್ವವನ್ನು ಪ್ರತಿನಿಧಿಸುತ್ತದೆ. ಇವುಗಳಲ್ಲಿ ಬರುವ ಪ್ರಾಸ ಹಾಗೂ ಲಯಬದ್ಧ ರಚನೆಯು ಒಂದಕ್ಕೊಂದು ಪೂರಕವಾಗಿದ್ದು, ಅವು ಆಳವಾದ ಅರ್ಥ ಮತ್ತು ಶ್ರೀಮಂತ ಪದ ಲಾಲಿತ್ಯದ ಮೆರುಗನ್ನು ಮೇಳೈಸಿಕೊಂಡು, ಕೃತಿ–ಕಾವ್ಯಗಳಿಗೆ ಸ್ನಿಗ್ಧತೆ ಹಾಗೂ ಊಹಾತೀತ ಸೌಂದರ್ಯವನ್ನು ಸ್ಫುರಿಸುತ್ತವೆ. **ರವೀಂದ್ರ ಸಂಗೀತವು** ತನ್ನ ಮಾಧುರ್ಯದ ಮೂಲಕ ಹೊಮ್ಮಿಸುವ ಭಾವ ತೀವ್ರತೆ, ತನ್ಮೂಲಕ ಮನುಷ್ಯನ ಮನೋಲಯವನ್ನು ಔನ್ನತ್ಯಕ್ಕೇರಿಸುವ ಪರಿಯ ಮೂಲಕ ಸಾಮಾನ್ಯನೂ ಕೂಡ ಈ ಪ್ರಕಾರದ **ಸಂಗೀತ** ಹಾಗೂ ಇತರೆ ಸಂಗೀತದ ರಚನಾ ಶೈಲಿ, ಚೌಕಟ್ಟು ಹಾಗೂ ಭಿನ್ನತೆಯನ್ನು ಸುಲಭವಾಗಿ ಗುರುತಿಸಬಹುದು. ಇಲ್ಲಿ ಮತ್ತೊಂದು ಪ್ರಮುಖ ಅಂಶವೆಂದರೆ ಬಂಗಾಳಿ ಭಾಷೆಯ ಪದಗಳ ರಚನಾ ವ್ಯವಸ್ಥೆಯಲ್ಲಿ ಒತ್ತು ನೀಡಿ ವ್ಯಕ್ತಗೊಳ್ಳುವ ಕೊರತೆಯು ಗುರುದೇವ ರವೀಂದ್ರರಿಗೆ ಬಂಗಾಳಿ ಭಾಷೆಯ ಕೃತಿ–ಕಾವ್ಯಗಳಿಗೆ ತಮ್ಮದೇ ಆದ ಸಂಗೀತ ಪ್ರಕಾರದ ಮೂಲಕ ಸ್ವರ ಸಂಯೋಜನೆಯನ್ನು ಸುಲಲಿತವಾಗಿ ಬಳಸಲು ವರವಾಗಿ ಪರಿಣಮಿಸಿತು.

ಸ್ವತಃ ಗುರುದೇವರು ತಮ್ಮ **'Bengali Words and Metre'** ಎಂಬ ಆಂಗ್ಲ ಲೇಖನದಲ್ಲಿ **'ಬಂಗಾಳಿ ಭಾಷೆಯ ಉಚ್ಚಾರಣೆಯು ಎಂದೆಂದೂ ಬಂಗಾಳದ ಬಯಲು ಸೀಮೆಯಂತೆ ವಿಸ್ತಾರವಾದುದು ಹಾಗೂ ಅದರದೇ ಸ್ವಾಭಾವಿಕ ರೂಪ; ಬಹುವಿಧ ಶಬ್ದ ಗಾಂಭೀರ್ಯದ ಕಾರಣ ಬಂಗಾಳಿ ಭಾಷೆಯ ಉಚ್ಚಾರಣೆಯಲ್ಲಿ ಪದಗಳ ಸಂಘರ್ಷದಿಂದ ಉಂಟಾಗುವ ಹಾನಿಯ ಸಾಧ್ಯತೆಗಳು ಕಡಿಮೆ, ಅಲ್ಲದೆ ಭಾಷೆಯ ಉಚ್ಚಾರಣೆಯ ಧ್ವನಿಯಲ್ಲಿ ಒತ್ತಕ್ಷರ ಅಥವಾ ತೀವ್ರತೆಯ ಕೊರತೆಯ ಕಾರಣದಿಂದ ಸಹಜವಾಗಿ ಮತ್ತು ಸುಲಭವಾಗಿ ಪ್ರತಿ ಪದದೊಳಗೆ ಮಾರ್ಧುಯವು ಹೊಕ್ಕಿ ಕೇಳುಗನ ಮನಸ್ಸನ್ನು ಸಂಪೂರ್ಣವಾಗಿ ಆವರಿಸಿ ಬಿಡುತ್ತದೆ, ಶಬ್ದಗಳಲ್ಲಿನ ಕೊರತೆಯನ್ನು ಮಾಧುರ್ಯವು ತುಂಬಿ ಬಿಡುತ್ತದೆ'** ಎಂದು ಉಲ್ಲೇಖಿಸುತ್ತಾರೆ.

ರಬೀಂದ್ರ ಸಂಗೀತದ ಪ್ರಮುಖ ಲಕ್ಷಣವೆಂದರೆ ತಾಳ ಮತ್ತು ಲಯದ ಹೊಂದಾಣಿಕೆ, ಇವು ಈ ಪ್ರಕಾರದ ಸಂಗೀತದಲ್ಲಿ ಸದಾ ಅವಿಚ್ಛಿನ್ನವಾಗಿದ್ದು, ಒಮ್ಮೆ ಸ್ವರ ಪ್ರಸ್ತಾರವನ್ನು ಸಂಯೋಜಿಸಿದಲ್ಲಿ ಸಾಹಿತ್ಯ/ಕಾವ್ಯದಲ್ಲಿನ ಪದ ಅಥವಾ ಶಬ್ದವನ್ನೂ ಸಹ ತಿರುಚಲು ಸಾಧ್ಯವಾಗುವುದಿಲ್ಲ ಮತ್ತು ಸಂಗೀತದೊಂದಿಗೆ ಬೆರೆತ ಸಾಹಿತ್ಯವು ಅದ್ಭುತ ಸಂಗೀತದ ಹೊನಲಾಗಿ ಹರಿಯಲಾರಂಭಿಸುತ್ತಿತ್ತು. ರವೀಂದ್ರರು ತಮ್ಮ ಶೈಲಿಯ ಸಂಗೀತದಲ್ಲಿ ರಾಗ ಹಾಗೂ ತಾಳಗಳಿಗೆ ಹೆಚ್ಚು ಒತ್ತು ನೀಡಿ

ಪರಮೋಚ್ಚ ಸ್ಥಾನವನ್ನು ನೀಡಿದ್ದರು, ಆದರೆ ಕೆಲ ಸಂದರ್ಭಗಳಲ್ಲಿ ಸಾಹಿತ್ಯದ ವ್ಯಾಕರಣಕ್ಕೆ ಅಷ್ಟಾಗಿ ಸ್ಥಾನ ನೀಡುವುದು ಅವರಿಗೆ ರುಚಿಸುತ್ತಿರಲಿಲ್ಲ. ಇನ್ನು ಹಿಂದೂಸ್ತಾನಿ ಸಂಗೀತವನ್ನು ಕುರಿತು ಗುರುದೇವ ರವೀಂದ್ರರು **'ಬಾಲ್ಯದಿಂದಲೂ ನಾನು ಸುಶ್ರಾವ್ಯ ಹಿಂದೂಸ್ತಾನಿ ಗಾಯನವನ್ನು ಆಸ್ವಾದಿಸಿದ್ದೇನೆ, ಆ ಸಂದರ್ಭಗಳಲ್ಲಿ ನಾನು ಮನಃಪೂರ್ವಕವಾಗಿ ಅದರಲ್ಲಿನ ಹಿರಿಮೆ ಹಾಗೂ ಸೌಂದರ್ಯವನ್ನು ಗುರುತಿಸುತ್ತಿದ್ದೆ, ಹಿಂದೂಸ್ತಾನಿ ಸಂಗೀತದಲ್ಲಿನ ವಿಶಾಲವಾದ ಪ್ರಾಮುಖ್ಯತೆ, ಅಂದರೆ ಪ್ರತಿ ಕ್ಷಣವೂ ಸಂಗೀತದಲ್ಲಿ ಹೊಸ ಸೌಂದರ್ಯ ಸೃಷ್ಟಿಯ ಅನಾವರಣಗೊಳ್ಳುವ ಮುಕ್ತತೆ, ಅದರಲ್ಲೂ ಪಾಶ್ಚಿಮಾತ್ಯ ಸಂಗೀತದೊಂದಿಗೆ ತುಲನೆ ಮಾಡಿದಾಗ ನಾನು ಅರ್ಥೈಸಿಕೊಳ್ಳುತ್ತಿದೆ. ನಾನು ನಿಜವಾಗಿಯೂ ಹಿಂದೂಸ್ತಾನಿ ಸಂಗೀತದ ತಾನ್‌ಗಳಿಗೆ ಸಮ್ಮೋಹನಗೊಳ್ಳುತ್ತಿದ್ದೆ. ಈ ಸಂಗೀತದಲ್ಲಿ (ಹಿಂದೂಸ್ತಾನಿ) ಕೀರ್ತನೆಗಳ ಒಳ ಅರ್ಥವನ್ನು ಎಳೆ, ಎಳೆಯಾಗಿ ಬಿಡಿಸಿ ಪದಾವಳಿಗಳ ಮೂಲಕ ಸಾಹಿತ್ಯದ ಆಳಕ್ಕೆ (ಅಖಾರ್) ತಲುಪುತ್ತಿದ್ದೆವು. ಪ್ರತಿ ವಾಕ್ಯಗಳಲ್ಲಿನ ಈ ಅಖಾರ್ ಅಥವಾ ತಾನ್‌ಗಳು ಕಾವ್ಯದ ಸೀಮಿತ ಅರ್ಥವ್ಯಾಪ್ತಿಯನ್ನು ಮೀರಿ ಅಗ್ನಿ ವರ್ತುಲದಂತೆ ಕಿಡಿಗಳನ್ನು ಹೊರ ಸೂಸುತ್ತಿದ್ದವು, ಇಲ್ಲಿ ಸಂಗೀತವು ಪ್ರಖರವಾದ ಅಗ್ನಿ ವರ್ತುಲದಂತೆ ಪರಿಣಮಿಸಿ ಕಾವ್ಯದೊಂದಿಗೆ ಬೆರೆದು ಭಾವೋತ್ಕರ್ಷಕ್ಕೆ ಹೊಸ ತೀವ್ರತೆಯನ್ನು ನೀಡುತ್ತಿತ್ತು, ಅದು ಕೀರ್ತನೆ ಹಾಗೂ ಮಾಧುರ್ಯದ ಸಮ್ಮಿಲನವಾಗಿ ಅರ್ಧನಾರೀಶ್ವರನಂತೆ ಕಂಗೊಳಿಸುತ್ತಿತ್ತು'** ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಠಾಗೂರರು ಎಂದೂ ಅನ್ಯ ದೇಶಿ ಸಂಗೀತ ಪ್ರಕಾರಗಳನ್ನು ಹಾಗೂ ವಿದೇಶಿ ಸಂಗೀತ ಪ್ರಕಾರಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಿಲ್ಲ, ಕಾರಣ ರಬೀಂದ್ರ ಸಂಗೀತದಲ್ಲಿ ಸಾಹಿತ್ಯ ಹಾಗೂ ಸಂಗೀತದ ಮಿಶ್ರಣವೇ ಪ್ರಮುಖ ವಾಹಿನಿ, ಅದರ ಬದಲು ಶಾಸ್ತ್ರೀಯವಾಗಿ ಹಿಂದೂಸ್ತಾನಿ ಸಂಗೀತವನ್ನು ಕರತಲಾಮಲಕ ಮಾಡಿಕೊಂಡು ತಮ್ಮದೇ ಆದ ಶೈಲಿಯನ್ನು ಅನ್ವೇಷಿಸಿ ಅಭಿವ್ಯಕ್ತಗೊಳಿಸಬಹುದು, ಕೇವಲ ಎರವಲು ಪಡೆಯುವುದರಿಂದ ನಿಜವಾದ ರಸವನ್ನು ಸೃಜಿಸಲು ಯಾವುದೇ ಸಾಹಿತ್ಯ ಅಥವಾ ಸಂಗೀತದಲ್ಲಿ ಸಾಧ್ಯವಿಲ್ಲ ಎಂಬುದು ಅವರ ಅಭಿಮತವಾಗಿತ್ತು. ರವೀಂದ್ರ ಸಂಗೀತವು ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ ಹಾಗೂ ಪಾಶ್ಚಿಮಾತ್ಯ ಸಂಗೀತಗಳ ಸಂಗಮವೇ ಆದರೂ, ಅದರ ಮೂಲ ಬೇರು ಬಂಗಾಳಿಯೇ ಮತ್ತು ಇದರಲ್ಲಿ ಹಲವು ರಾಜ್ಯಗಳ ಲೋಕ ಸಂಗೀತ ಅಥವಾ ಜಾನಪದ ಸಂಗೀತವೂ ಸ್ಥಾನಪಡೆದಿವೆ. ರವೀಂದ್ರ ಸಂಗೀತ ಪ್ರಕಾರದಲ್ಲಿ ರೂಪಕ, ರೂಪ್‌ಕದಾ, ಝಂಪ್‌ತಾಳ್, ಝಂಪಕ್, ಏಕತಾಳ್, ಕಾವ್ವೋಲಿ, ಟುಮ್ರಿ, ಅಧಾತೇಕ, ಚೌತಾಳ್, ದಾದ್ರಾ, ಯತಾ, ಕಾಶ್ಮೀರಿ ಖೇಮ್ಟಾ, ಆಧಾಚೌತಾಳ್, ಸುರ್ಫಾಕ್‌ತಾಳ್, ತಿಯೋಡಾ, ಇತ್ಯಾದಿ.

ರವೀಂದ್ರರ 2,500 ಕೃತಿಗಳನ್ನು ಪೂಜಾ ಗೀತೆಗಳು, ಪ್ರೇಮ ಗೀತೆಗಳು, ಪ್ರಕೃತಿ ಗೀತೆಗಳು, ಅನುಸ್ಥಾನಿಕ ಗೀತೆಗಳು, ಇತ್ಯಾದಿಗಳಾಗಿ ವಿಭಾಗಿಸಲಾಗಿದೆ. ರವೀಂದ್ರರ ಹಲವು ನೃತ್ಯ ರೂಪಕಗಳು ಸಂಗೀತ ಪ್ರಧಾನವಾದುದು ಹಾಗೂ ವೈಷ್ಣವ ಸಾಹಿತ್ಯವಲ್ಲದೆ ಅವರು ಕೆಲವು ವೇದ ಕಾವ್ಯಗಳಿಗೂ ಸಹ ಎಂದು ಸಂಗೀತ ಸಂಯೋಜಿಸಿದ್ದರು. 1905ರ ವಂಗ-ಭಂಗ ಚಳುವಳಿಯ ಸಂದರ್ಭದಲ್ಲಿ ಬಂಗಾಳ ಏಕೀಕರಣಕ್ಕೆ ಹಾಗೂ ರಾಷ್ಟ್ರ ಪ್ರೇಮದ ದ್ಯೋತಕವಾಗಿ ಚಳುವಳಿಕಾರರಿಗೆ, ಕ್ರಾಂತಿಕಾರಿಗಳಿಗೆ ಅವರ ಹಲವು ಗೀತೆಗಳು ಉತ್ತೇಜನ ನೀಡಿದವು. **'ವಾಲ್ಮೀಕಿ ಪ್ರೊತಿಭಾ'** ಮತ್ತು **'ಕಾಲ ಮೃಗಯಾ'** ಇವೆರಡೂ

ರವೀಂದ್ರರು ತಮ್ಮ 19ನೇ ವಯಸ್ಸಿನಲ್ಲಿ ಸಂಯೋಜಿಸಿದ ನೃತ್ಯ ರೂಪಕಗಳು. ಗುರುದೇವ ರವೀಂದ್ರನಾಥ್ ಠಾಗೂರರು ತಮ್ಮ ನೃತ್ಯ–ರೂಪಕಗಳ ಸಂಯೋಜನೆಯಲ್ಲಿ ಶಾಸ್ತ್ರೀಯ ನೃತ್ಯ ಪ್ರಕಾರಗಳಾದ ಭರತನಾಟ್ಯ, ಕೂಚುಪುಡಿ, ಕಥಕಳ್ಳಿ, ಕಥಕ್, ಮಣಿಪುರಿ, ಒಡಸ್ಸಿ ಅಲ್ಲದೆ ಜಾನಪದ ನೃತ್ಯ ಪ್ರಕಾರಗಳಾದ ಗರ್ಭಾ, ಚೌಹು, ಬಿಹು, ಭೌಲ್ ಹಾಗೂ ಜಪಾನ್, ಬಾಲಿ, ಕಾಂಡ್ಯನ್ ದೇಶಗಳ ನೃತ್ಯ ಪ್ರಕಾರಗಳನ್ನು ಅಳವಡಿಸಿಕೊಂಡಿದ್ದಾರೆ.

ಸಂಗೀತ ಕುರಿತಾಗಿ ಗುರುದೇವ ರವೀಂದ್ರರು **'ಸಂಗೀತ ಚಿಂತನ'**ದ **'Thoughts on Music'** ಲೇಖನದಲ್ಲಿ ಹೀಗೆ ಬರೆಯುತ್ತಾರೆ: **'ನಾನು ಜನಿಸಿದ್ದು ಬಂಗಾಳದಲ್ಲಿ ಆರಂಭಗೊಂಡ ನವ ಯುಗದ ಹೊಸ್ತಿಲಲ್ಲಿ, ಆ ಸಂದರ್ಭದಲ್ಲಿ ಹಳೇ ದಿನಗಳ ಬೆಳಕು ನಿಧಾನವಾಗಿ ಸರಿಯುತ್ತಿತ್ತು, ಆದರೆ ಸಂಪೂರ್ಣವಾಗಿ ನಶಿಸಿರಲಿಲ್ಲ. . . . ಅಂದಿನ ದಿನಗಳಲ್ಲಿ, ಸ್ಥಿತಿವಂತ ಕುಟುಂಬಗಳಲ್ಲಿ ಸಂಗೀತ ಜ್ಞಾನವನ್ನು ಸುಶಿಕ್ಷಿತರ ಲಕ್ಷಣವೆಂದು ಪರಿಗಣಿಸಲಾಗಿತ್ತು. ಸಂಗೀತದಲ್ಲಿ ಎರಡು ಬಗೆಯ ಶೈಲಿಗಳಿದ್ದು, ಒಂದು ಶ್ರೀಮಂತರ ಡ್ರಾಯಿಂಗ್ ರೂಂಗಳಲ್ಲಿ ಕೇಳುತ್ತಿದ್ದ ಉತ್ಕೃಷ್ಟ ಮಟ್ಟದ ಸಂಗೀತ ಇನ್ನೊಂದು ಜನಪದ ಸಂಗೀತ. ಕಾಲ ಕ್ರಮೇಣ ಉತ್ಕೃಷ್ಟ ಸಂಗೀತವು ಜನ ಸಾಮಾನ್ಯರ ಕಿವಿಗಳಿಗೆ ತಲುಪಲಾರಂಭಿಸಿತು, ಸಂಗೀತ ಗಾಯನದ ಹೊನಲು ಬಂಗಾಳದ ನದಿ–ಉಪನದಿಗಳ ಜಾಲದಂತೆ ವಿಶಾಲವಾಗಿ ಗಾನ ಹೊನಲು ಹರಿದು ತನ್ನೊಳಗೆ ವಿವಿಧ ಚಿಲುಮೆಗಳಾದ ಜಾತ್ರಾ, ಪಾಂಚಾಲಿ, ಕಥಾಕತ, ಇವುಗಳನ್ನು ಸೇರಿಸಿಕೊಂಡು ಕವಿಗಳ ಗಾನವಾಗಿ ಹೊರಹೊಮ್ಮಿತು, ಇದರೊಂದಿಗೆ ಕೀರ್ತನ ಪರಂಪರೆಯೂ ಸಹ ಉತ್ತೇಜನ ನೀಡಿತು, ಇಷ್ಟು ವೈವಿಧ್ಯಮಯವಾಗಿ ಜಾನಪದ ಸಂಗೀತವು ಉಳಿದುಕೊಂಡು ಬಂದಿರುವ ಅನ್ಯ ದೇಶವನ್ನು ನಾ ಕಾಣೆ'**

ಇಂದು ಜಗತ್ತಿನ ಪ್ರಮುಖ ಸಂಗೀತ ಪ್ರಕಾರಗಳಲ್ಲಿ **'ರಬೀಂದ್ರ ಸಂಗೀತ'**ವು ತನ್ನದೇ ಆದ ಛಾಪು ಮೂಡಿಸಿ ಕಲಾ ರಸಿಕರ ಹೃದಯದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿ ಗುರುತಿಸಿಕೊಂಡಿದೆ ಹಾಗೂ ಇದರ ಹುಟ್ಟು ಪುಣ್ಯ ಭೂಮಿಯಾದ ಭಾರತ ಎಂಬುದು ಹೆಮ್ಮೆಯ ಸಂಗತಿ, ಮನುಷ್ಯನಲ್ಲಿ ಹೊರಹೊಮ್ಮುವ ಭಾವ ಲಹರಿಯ ಮೂರ್ತರೂಪವೇ ಸಂಗೀತವೆಂದರೆ ಅತಿಶಯೋಕ್ತಿಯಲ್ಲ ಹಾಗೂ ವಿಶ್ವ ಸಂಗೀತ ಪ್ರಕಾರಗಳಲ್ಲಿನ ವೈವಿಧ್ಯತೆಗಳಲ್ಲಿ ಉತ್ಕೃಷ್ಟವಾದುದನ್ನು ತನ್ನಲ್ಲಿ ಅಳವಡಿಸಿಕೊಂಡು ಈ ಮಣ್ಣಿನ ಸೊಗಡಿನ ಪರಂಪರೆಯೊಂದಿಗೆ ಗಂಧವಾಗಿ ಬೆರೆತಿರುವ, ರಸ ಋಷಿ ಗುರುದೇವ ರವೀಂದ್ರರಿಂದ ಸೃಷ್ಟಿಗೊಂಡ ಈ ಸಂಗೀತ ಪ್ರಕಾರವು ಸರ್ವ ಮಾನ್ಯವಾದುದು ಹಾಗೂ ಆ ಸಂಗೀತ ಗಂಧರ್ವ ಹಾಗೂ ದ್ರಷ್ಟಾರನಿಗೆ ನನ್ನ ಅನಂತಾನಂತ ನಮನಗಳು.

(ಡಾ॥ ಎಸ್.ಸಿ. ಶರ್ಮ)
ಶಿಕ್ಷಣ ತಜ್ಞರು ಹಾಗೂ ಸಂಗೀತಜ್ಞರು
ಮತ್ತು
(ಡಾ॥ ಉದಯ್ ಕಿರಣ್)
ಸಹಾಯಕ ಪ್ರಾಧ್ಯಾಪಕರು,
ಜೈನ್ ವಿಶ್ವವಿದ್ಯಾನಿಲಯ, ಸಂಗೀತ ವಿಭಾಗ

ಜಂಜ